2.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು-560001.	080-2225 2329
3.	ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ. ಟವರ್, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು -560001	080-2286 7385
4.	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 5ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಜಯನಗರ, ಬೆಂಗಳೂರು-560011	080-2663 2973
5.	ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿ, ನಂ.55, ಅಭಯ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020.	080-2346 2625
6.	ಕರ್ನಾಟಕ ರಾಜ್ಯ ಮಹಿಳಾ ಆಯೋಗ, 5ನೇ ಮಹಡಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು - 560009.	080-2210 0435

7.	ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ನಂ.55, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಕಚೇರಿ ಕಟ್ಟಡ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು- 560 020	080-2346 0064
8.	ಜವಾಹರ್ ಭಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಮ್ಯೂಸಿಯಂ ರಸ್ತೆ, ಬೆಂಗಳೂರು – 560001	080-2286 4189
9.	ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೃಷಿ ಭವನ, ಹಡ್ಸನ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು - 560002	080-2211 5290
10.	ಬಾಲ ವಿಕಾಸ ಅಕಾಡೆಮಿ, ವಿಶೇಷ ಪೊಲೀಸ್ ಠಾಣೆ ಎದುರು, ಮಹಂತೇಶ್ ನಗರ, ಧಾರವಾಡ -580008	0836-244 5490

II. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕಾರ್ಯಗಳು :

- ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣ ಹಾಗೂ ಮಕ್ಕಳ ರಕ್ಷಣೆ / ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಯ್ದೆ ಕಾನೂನು, ನೀತಿ, ಯೋಜನೆಗಳ ಹಾಗೂ ಕಾರ್ಯಕ್ರಮಗಳ ಚೌಕಟ್ಟಿನ ರಚನೆ ಹಾಗೂ ಅನುಷ್ಠಾನ.
- ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸಾರ್ವತ್ರೀಕರಣ, ಮೂಲ ಕರ್ಮಚಾರಿಗಳ ತರಬೇತಿ, ಪ್ರಾಯ ಪೂರ್ವ ಬಾಲಕಿಯರಿಗೆ ಪೌಷ್ಠಿಕಾಂಶ, ಕೌಶಲ್ಯ ಆಧಾರಿತ ಶಿಕ್ಷಣ, ವೃತ್ತಿಪರ ತರಬೇತಿ, ಆರೋಗ್ಯ ಶಿಕ್ಷಣ ಹಾಗೂ ಗೃಹ ಆಧಾರಿತ ಚಟುವಟಿಕೆಗಳ ಬಗ್ಗೆ ಕೌಶಲ್ಯವನ್ನು ಒದಗಿಸುವುದು.
- ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಅನುಷ್ಠಾನ.
- ಮಹಿಳೆಯರ ಹಾಗೂ ಮಕ್ಕಳ ಸಾಗಣೆ ಬಗ್ಗೆ ಅರಿವು ಮೂಡಿಸುವುದು, ಸಾಗಾಣೆಗೆ ಒಳಪಟ್ಟ ಮಹಿಳೆಯರ ಹಾಗೂ ಮಕ್ಕಳಿಗಾಗಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪುನರ್ವಸತಿ ಕೇಂದ್ರಗಳ ಸ್ಥಾಪನೆ, ಅಲ್ಲದೆ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಅಲ್ಪಾವಧಿ ಗೃಹ/ಕೇಂದ್ರ ಹಾಗೂ ಸಾಂತ್ವನ ಕೇಂದ್ರಗಳ ಸ್ಥಾಪನೆ.
- ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು. ವಿವಿಧ ಸಂಸ್ಥೆಗಳಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ನಿದಗಿಪಡಿಸುವ ಪ್ರಕ್ರಿಯೆ ಬಗ್ಗೆ ಕಾರ್ಯ ಕರ್ತವ್ಯ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ತರಬೇತಿ ನೀಡುವುದು.
- ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯನ್ನು ಒಮ್ಮುಖವಾಗುವಂತೆ ನೋಡಿಕೊಳ್ಳುವುದು.
- ಆಸ್ತಿ ಇಲ್ಲದ ಹಾಗೂ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಸೂಕ್ಷ್ಮ ಜಮಾಕಟ್ಟು ನೆರವು ಪಡೆಯಲು ಅನುಕೂಲತೆಯನ್ನು ಕಲ್ಪಿಸುವುದು.
- ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಉತ್ತೇಜಿಸುವುದು ಹಾಗೂ ಅನುಷ್ಠಾನಗೊಳಿಸುವುದು.

ಕರ್ನಾಟಕ ರಾಜ್ಯ (ವ್ಯವಹಾರ ಹಂಚಿಕೆ) ನಿಯಮಗಳು, 1977ರನ್ವಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಹಾಗೂ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಕ್ಕೆ ಸಂಬಂಧಿಸಿದ ವಿಷಯಗಳನ್ನು ಹಂಚಿಕೆ ಮಾಡಿದ್ದು, ಕರ್ನಾಟಕ ರಾಜ್ಯ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರನ್ವಯ, ಈ ವಿಷಯಗಳಿಗೆ ಸಂಬಂಧಿಸಿದ ನೀತಿಯನ್ನು ಸರ್ಕಾರದ ಹಂತದಲ್ಲಿ ರೂಪಿಸುತ್ತಿದ್ದು, ಮೇಲೆ ಸೂಚಿಸಿದ ಇಲಾಖೆಗಳು ಇದನ್ನು ಅನುಷ್ಠಾನಗೊಳಿಸಲು ಸೂಕ್ತ ಆದೇಶ/ಸೂಚನೆಗಳನ್ನು ಸರ್ಕಾರದ ಹಂತದಲ್ಲಿ ನೀಡಲಾಗುತ್ತಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ : ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇಲಾಖೆಯ ಅಧಿಕೃತ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯ ಪ್ರಭಾರ ಹೊಂದಿರುವ ಸಚಿವರ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೊಳಪಟ್ಟು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳನ್ವಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ವಿಲೇವಾರಿಯ ಜವಾಬ್ದಾರಿ ಹೊಂದಿರುತ್ತಾರೆ. ಇವರು ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಮತ್ತು ಪ್ರಕರಣಗಳನ್ನು ವಿಲೇ ಮಾಡುವಲ್ಲಿ ಸಂದರ್ಭಾನುಸಾರ, ಮಾನ್ಯ ಇಲಾಖಾ ಸಚಿವರು ಅಥವಾ ಸರ್ಕಾರಕ್ಕೆ ನೆರವು ನೀಡುತ್ತಾರೆ ಮತ್ತು ಸಲಹೆ ಕೊಡುತ್ತಾರೆ.

ಪತ್ರಾಂಕಿತ ಆಪ್ತ ಕಾರ್ಯದರ್ಶಿ: ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧಿಕೃತ ಕೆಲಸ ಕಾರ್ಯಗಳ ನಿರ್ವಹಣೆ, ದೂರವಾಣಿ ನಿರ್ವಹಣೆ ಹಾಗೂ ಪ್ರಧಾನ ಕಾರ್ಯದರ್ಶಿಯವರ ದಿನ ನಿತ್ಯದ ಕಾರ್ಯಕ್ರಮಗಳ ಪಟ್ಟಿ ತಯಾರಿಸುವಿಕೆ.

ಶೀರ್ಘಲಿಪಿಗಾರ್ತಿ:ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ನೀಡುವ ಉಕ್ತಲೇಖನ/ ಬೆರಳಚ್ಚುವಿಕೆ ಹಾಗೂ ಶಾಖೆಗೆ ಸಂಬಂಧಿಸಿದ ವಿಷಯಗಳ ಬೆರಳಚ್ಚುವಿಕೆ ವಿವಿಧ ಬಿಲ್ಲುಗಳ ತಯಾರಿಕೆ ಹಾಗೂ ಪ್ರಧಾನ ಕಾರ್ಯದರ್ಶಿಗಳು ಸೂಚಿಸುವ ಇತರೆ ಕೆಲಸಗಳು.

ದಲಾಯತ್/ಜಮೇದಾರ: ಆಪ್ತ ಶಾಖೆಗೆ ಬರುವ ಕಡತ/ ಪತ್ರಗಳನ್ನು ಸಂಬಂಧಿಸಿದ ಶಾಖೆಗಳಿಗೆ ಹಾಗೂ ಹೊರಗೆ ಸಂಬಂಧಪಟ್ಟವರಿಗೆ ತಲುಪಿಸುವುದು ಹಾಗೂ ಕೈಪಿಡಿಯಲ್ಲಿ ಗ್ರೂಪ್ ಡಿ ಹುದ್ದೆಗೆ ಸೂಚಿಸಿರುವಂತೆ ಕೆಲಸಗಳನ್ನು ನಿರ್ವಹಿಸುವುದು.

ಸರ್ಕಾರದ ಜಂಟಿ ಕಾರ್ಯದರ್ಶಿ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನಂತರದ ಅಧಿಕಾರಿಯಾಗಿರುತ್ತಾರೆ. ಸಚಿವರ ಅನುಮೋದನೆಯೊಂದಿಗೆ ಪ್ರಧಾನ ಕಾರ್ಯದರ್ಶಿಗಳು ಇವರಿಗೆ ನೀಡಿರುವ ಪ್ರತ್ಯಾಯೋಜನೆ ಪ್ರಕಾರ ಕಾರ್ಯನಿರ್ವಹಿಸುತ್ತಾರೆ. ಇಲಾಖೆಗೆ ಸಂಬಂಧಪಟ್ಟಂತೆ ಸಂಘಟನೆ ಮತ್ತು ವಿವೇಚನಾಧಿಕಾರಿಯಾಗಿರುತ್ತಾರೆ. ಇವರಿಗೆ ಸರ್ಕಾರದ ಅಧೀನ ಕಾರ್ಯದರ್ಶಿ-1, 2 ಮತ್ತು 3 ನೆರವು ನೀಡುತ್ತಾರೆ. ಇವರು ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕಾರ ರಾಜ್ಯ ಸಾರ್ವಜನಿಕ ಮಾಹಿತಿಯ ಮೊದಲ ಮೇಲ್ಮನವಿ ಪ್ರಾಧಿಕಾರವೂ ಸಹ ಆಗಿರುತ್ತಾರೆ.

ಶೀರ್ಘಲಿಪಿಗಾರರು: ಸರ್ಕಾರದ ಜಂಟಿ ಕಾರ್ಯದರ್ಶಿಯವರು ನೀಡುವ ಉಕ್ತಲೇಖನ/ ಬೆರಳಚ್ಚುವಿಕೆ ಹಾಗೂ ಶಾಖೆಗೆ ಸಂಬಂಧಿಸಿದ ವಿಷಯಗಳ ಬೆರಳಚ್ಚುವಿಕೆ, ವಿವಿಧ ಬಿಲ್ಲುಗಳ ತಯಾರಿಕೆ ಹಾಗೂ ಜಂಟಿ ಕಾರ್ಯದರ್ಶಿಗಳು ಸೂಚಿಸುವ ಇತರೆ ಕೆಲಸಗಳು

ಸರ್ಕಾರದ ಉಪ ಕಾರ್ಯದರ್ಶಿ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನಂತರದ ಅಧಿಕಾರಿಯಾಗಿರುತ್ತಾರೆ. ಸಚಿವರ ಅನುಮೋದನೆಯೊಂದಿಗೆ ಕಾರ್ಯದರ್ಶಿಗಳು ಇವರಿಗೆ ನೀಡಿರುವ ಪ್ರತ್ಯಾಯೋಜನೆ ಪ್ರಕಾರ ಕಾರ್ಯನಿರ್ವಹಿಸುತ್ತಾರೆ. ಇಲಾಖೆಗೆ ಸಂಬಂಧಪಟ್ಟಂತೆ ಸಂಘಟನೆ ಮತ್ತು ವಿವೇಚನಾಧಿಕಾರಿಯಾಗಿರುತ್ತಾರೆ. ಇವರಿಗೆ ಸರ್ಕಾರದ ಅಧೀನ ಕಾರ್ಯದರ್ಶಿ-1, 2 ಮತ್ತು 3 ನೆರವು ನೀಡುತ್ತಾರೆ. ಇವರು ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕಾರ ರಾಜ್ಯ ಸಾರ್ವಜನಿಕ ಮಾಹಿತಿಯ ಮೊದಲ ಮೇಲ್ಮನವಿ ಪ್ರಾಧಿಕಾರವೂ ಸಹ ಆಗಿರುತ್ತಾರೆ.

ಶೀರ್ಘಲಿಪಿಗಾರರು: ಸರ್ಕಾರದ ಉಪ ಕಾರ್ಯದರ್ಶಿಯವರು ನೀಡುವ ಉಕ್ತಲೇಖನ/ ಬೆರಳಚ್ಚುವಿಕೆ, ವಿವಿಧ ಬಿಲ್ಲುಗಳ ತಯಾರಿಕೆ ಹಾಗೂ ಉಪ ಕಾರ್ಯದರ್ಶಿಗಳು ಸೂಚಿಸುವ ಇತರೆ ಕೆಲಸಗಳು.

ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು: ಇವರು ಹಣಕಾಸು ಸಂಬಂಧಿತ ವಿಷಯಗಳಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಸಲಹೆ ನೀಡುತ್ತಾರೆ.

ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಕಾನೂನು ಕೋಶದ ಮುಖ್ಯಸ್ಥರು: ಇವರು ಕಾನೂನು ಸಂಬಂಧಿತ ವಿಷಯಗಳಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಸಲಹೆ ನೀಡುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ-1: ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಆದೇಶಗಳನ್ನು ಹೊರಡಿಸಲು ಅಧಿಕೃತವಾದ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ-19ರನ್ವಯ ಕಾರ್ಯ ನಿರ್ವಹಣೆ ಸಂಬಂಧದಲ್ಲಿ ಹಾಗೂ ಶಿಸ್ತಿನ ಸಂಬಂಧದಲ್ಲಿ ತಮ್ಮ ಪ್ರಭಾರದಲ್ಲಿರುವ ಶಾಖೆಯ ಅಥವಾ ಶಾಖೆಗಳ ನಿಯಂತ್ರಣಾಧಿಕಾರವನ್ನು ಚಲಾಯಿಸುತ್ತಾರೆ. ಟಿಪ್ಪಣಿ ಮತ್ತು ಕರಡು ಪತ್ರದಲ್ಲಿ ವಿಳಂಬ ತಡೆಗಟ್ಟುವುದು, ಭಾಷಾಶೈಲಿ ಪರಿಶೀಲಿಸುವುದು, ಅತಿ ವಿಸ್ತಾರ ಭಾಷೆ ಬಳಸುವುದನ್ನು ಪರಿಶೀಲಿಸುವುದು ಅವರ ಕರ್ತವ್ಯವಾಗಿರುತ್ತದೆ. ಇವರು ಸಾಮಾನ್ಯವಾಗಿ ಸರ್ಕಾರದ ಕಾರ್ಯದರ್ಶಿಯವರ ಮತ್ತು ಸರ್ಕಾರದ ಜಂಟಿ / ಉಪ ಕಾರ್ಯದರ್ಶಿಯವರ ಆದೇಶಗಳನ್ವಯ ಕಾರ್ಯನಿರ್ವಹಿಸುತ್ತಾರೆ. ಇವರು ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು, ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ಸಾರ್ವಜನಿಕ ಮಾಹಿತಿ ಹಕ್ಕು ಅಧಿಕಾರಿಯಾಗಿರುತ್ತಾರೆ. ಇವರಿಗೆ ಇಲಾಖೆಯ ಎ ಶಾಖೆ ಮತ್ತು ಸ್ವೀಕೃತಿ ಮತ್ತು ರವಾನೆ ಶಾಖೆಯ ಶಾಖಾಧಿಕಾರಿಗಳು ನೆರವು ನೀಡುತ್ತಾರೆ.

<u>ಎ -ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು :</u>

ಶಾಖಾಧಿಕಾರಿ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ "ಎ" ಶಾಖೆಯ ಶಾಖಾಧಿಕಾರಿಯಾಗಿದ್ದು ಶಾಖೆಯಲ್ಲಿ ಅಂಗನವಾಡಿಗಳ ನಿರ್ವಹಣೆ/ ದುರಸ್ಥಿ ನಗರ ಪ್ರದೇಶಗಳಲ್ಲಿನ ಅಂಗನವಾಡಿಗಳ ಉನ್ನತೀಕರಣ, ನಬಾರ್ಡ್ ಸಹಾಯಧನದಡಿ ಅಂಗನವಾಡಿಗಳ ಕಟ್ಟಡಗಳ ನಿರ್ಮಾಣ, ಅಂಗನವಾಡಿ ಕಟ್ಟಡಗಳ ನಿರ್ಮಾಣ (ಎಸ್.ಡಿ.ಪಿ), ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಕಾಯ್ದೆಯಡಿ ಉಳಿಕೆಯಾದ ಮೊತ್ತ ಅಂಗನವಾಡಿ ಕಟ್ಟಡಗಳ ನಿರ್ಮಾಣ ನರೇಗಾ), ಪ್ರಾಯಪೂರ್ವ ಬಾಲಕಿಯರ ಯೋಜನೆ, ಅಂಗನವಾಡಿ ಕೇಂದ್ರಗಳ ಉನ್ನತೀಕರಣ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳಿಗೆ ಸಂಬಂಧಿಸಿದ ಸ್ವೀಕೃತಿಗಳು, ನೇಮಕಾತಿ/ವರ್ಗಾವಣೆಗೆ ಸಂಬಂಧಿಸಿದ ಸ್ವೀಕೃತಿಗಳು ಹಾಗೂ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳು, ರಾಜ್ಯವಲಯ ಕಾರ್ಯಕ್ರಮ, ಭಾಗ್ಯಲಕ್ಷ್ಮಿ ಯೋಜನೆ, ಸ್ತ್ರೀಶಕ್ತಿ ಯೋಜನೆ, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇಧ, ಹೆಚ್.ಐ.ವಿ/ಏಡ್ಸ್ ನಿಂದ ಬಾಧಿತರಾದ ಮಹಿಳೆಯರಿಗೆ ಆಶ್ರಯ, ಬಾಲಕಿಯರ ವಸತಿ ನಿರ್ವಹಣೆ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಯೋಜನೆ, ಸಂತ್ರಸ್ಥ ಮಹಿಳೆಯರಿಗೆ ಪುರ್ನವಸತಿ ಕಲ್ಪಿಸುವಂತಹ ಉಜ್ವಲ ಯೋಜನೆ, ಸ್ವಾಧಾರ ಗೃಹ ಯೋಜನೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮ ಹಾಗೂ ಸಂಬಂಧಿಸಿದ ನ್ಯಾಯಲಯದ ಪ್ರಕರಣಗಳು ಮತ್ತು ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಕಾರ್ಯಕ್ರಮ, ಉದ್ಯೋಗಸ್ಥ ಮಹಿಳೆಯರ ಶಿಶು ಪಾಲನಾ ಕೇಂದ್ರಗಳು, ಅಂಗನವಾಡಿ ಕಾರ್ಯಕರ್ತೆಯರ ಹೊಸ ಪಿಂಚಣಿ ವ್ಯವಸ್ಥೆ, ಜಿಲ್ಲಾ ಐ.ಸಿ.ಡಿ.ಎಸ್ ಘಟಕ, ಶಿಶು ಅಭಿವೃದ್ಧಿ ಯೋಜನೆ (204) ಘಟಕಗಳು, ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ, ಪೋಷಣ್

ಅಭಿಯಾನ್, ಜನತಾಬಜಾರ್ ಮತ್ತು ಮೆ. ಕ್ರಿಸ್ಟಿ ಪ್ರೈಡ್ ಗ್ರಾಂ ಇಂಡಸ್ಟ್ರೀಸ್ ಮತ್ತು ಎಂ.ಎಸ್.ಪಿ.ಟಿ.ಸಿ.ಗಳಿಗೆ ಸಂಬಂಧಿಸಿದ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂದಿಸಿದ ವಿಷಯಗಳನ್ನು ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳ ಸೂಚನೆಯಂತೆ ಕಛೇರಿಯ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

ಸಹಾಯಕರು-1: ಸಮಗ್ರ ಶಿಶು ಅಭಿವೃದ್ದಿ ಯೋಜನೆ, ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಕಾರ್ಯಕ್ರಮ, ಉದ್ಯೋಗಸ್ಥ ಮಹಿಳೆಯರ ಶಿಶು ಪಾಲನಾ ಕೇಂದ್ರಗಳು, ಅಂಗನವಾಡಿ ಕಾರ್ಯಕರ್ತೆಯರ ಹೊಸ ಪಿಂಚಣಿ ವ್ಯವಸ್ಥೆ, ಜಿಲ್ಲಾ ಐ.ಸಿ.ಡಿ.ಎಸ್ ಘಟಕ, ಶಿಶು ಅಭಿವೃದ್ದಿ ಯೋಜನೆ (204) ಘಟಕಗಳು, ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ, ಪೋಷಣ್ ಅಭಿಯಾನ್, ಜನತಾಬಜಾರ್ ಮತ್ತು ಮೆ. ಕ್ರಿಸ್ಟಿ ಪ್ರೈಡ್ ಗ್ರಾಂ ಇಂಡಸ್ಟ್ರೀಸ್ ಮತ್ತು ಎಂ.ಎಸ್.ಪಿ.ಟಿ.ಸಿ.ಗಳಿಗೆ ಅಂಗನವಾಡಿಗಳ ನಿರ್ವಹಣೆ/ ದುರಸ್ಥಿ ನಗರ ಪ್ರದೇಶಗಳಲ್ಲಿನ ಅಂಗನವಾಡಿಗಳ ಉನ್ನತೀಕರಣ, ನಬಾರ್ಡ್ ಸಹಾಯಧನದಡಿ ಅಂಗನವಾಡಿಗಳ ಕಟ್ಟಡಗಳ ನಿರ್ಮಾಣ, ಅಂಗನವಾಡಿ ಕಟ್ಟಡಗಳ ನಿರ್ಮಾಣ (ಎಸ್.ಡಿ.ಪಿ), ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಕಾಯ್ದೆಯಡಿ ಉಳಿಕೆಯಾದ ಮೊತ್ತ ಅಂಗನವಾಡಿ ಕಟ್ಟಡಗಳ ನಿರ್ಮಾಣ ನರೇಗಾ), ಪ್ರಾಯಪೂರ್ವ ಬಾಲಕಿಯರ ಯೋಜನೆ, ಅಂಗನವಾಡಿ ಕೇಂದ್ರಗಳ ಉನ್ನತೀಕರಣ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳಿಗೆ ಸಂಬಂಧಿಸಿದ ಸ್ವೀಕೃತಿಗಳು, ನೇಮಕಾತಿ/ವರ್ಗಾವಣೆಗೆ ಸಂಬಂಧಿಸಿದ ಸ್ವೀಕೃತಿಗಳು ಹಾಗೂ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳು ನಿರ್ದೇಶನಾಲಯದಿಂದ ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು. ಪ್ರಕರಣಗಳು ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಾಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು.

ಸಹಾಯಕರು-2: ರಾಜ್ಯವಲಯ ಕಾರ್ಯಕ್ರಮ, ಭಾಗ್ಯಲಕ್ಷ್ಮಿ ಯೋಜನೆ, ಸ್ತ್ರೀಶಕ್ತಿ ಯೋಜನೆ, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇಧ, ಹೆಚ್.ಐ.ವಿ/ಏಡ್ಸ್ ನಿಂದ ಬಾಧಿತರಾದ ಮಹಿಳೆಯರಿಗೆ ಆಶ್ರಯ, ಬಾಲಕಿಯರ ವಸತಿ ನಿರ್ವಹಣೆ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಯೋಜನೆ, ಸಂತ್ರಸ್ಥ ಮಹಿಳೆಯರಿಗೆ ಪುರ್ನವಸತಿ ಕಲ್ಪಿಸುವಂತಹ ಉಜ್ವಲ ಯೋಜನೆ, ಸ್ವಾಧಾರ ಗೃಹ ಯೋಜನೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮ ಹಾಗೂ ಸಂಬಂಧಿಸಿದ ನ್ಯಾಯಲಯದ ಪ್ರಕರಣಗಳು ಸಂಬಂದಿಸಿದಂತೆ ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಾಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು**.**

<u>ಸ್ವೀಕೃತಿ ಮತ್ತು ರವಾನೆ ಹಾಗೂ ಸಮನ್ವಯ ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಿಗಳು ಮತ್ತು ಕರ್ತವ್ಯಗಳು :</u>

ಶಾಖಾಧಿಕಾರಿ: ಸ್ವೀಕೃತಿ ಮತ್ತು ರವಾನೆ ಶಾಖೆಯಲ್ಲಿ ಸ್ವೀಕರಿಸುವ ಎಲ್ಲಾ ಪತ್ರಗಳನ್ನು ಶಾಖಾವಾರು ವಿಂಗಡಿಸಿ ಸಂಬಂಧಿಸಿದ ಶಾಖೆಗಳಿಗೆ ವಿತರಿಸುವುದು ಹಾಗೂ ಇಲಾಖೆಯಿಂದ ಹೊರಗಡೆ ಹೋಗುವ ಪತ್ರಗಳನ್ನು ರವಾನಿಸುವ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುವರು ಹಾಗೂ ಇಲಾಖೆಯ ಸಮನ್ವಯ ಕೆಲಸಗಳನ್ನು ನಿರ್ವಹಿಸುವರು.

ಸಹಾಯಕರು:ಇಲಾಖೆಯ ಸಮನ್ವಯ ಕಾರ್ಯನಿರ್ವಹಣೆ, ವಿಧಾನಸಭೆ/ವಿಧಾನ ಪರಿಷತ್ತುಗಳ ಪ್ರಶ್ನೆಗಳ ಸಮನ್ವಯ ಕಾರ್ಯ, ವಿಧಾನಸಭೆ/ವಿಧಾನ ಪರಿಷತ್ತುಗಳ ಅರ್ಜಿ ಸಮಿತಿಯಲ್ಲಿ ಬಾಕಿ ಇರುವ ಅರ್ಜಿಗಳ ಹಾಗೂ ವಿಧಾನಸಭೆ/ವಿಧಾನ ಪರಿಷತ್ತುಗಳ ಭರವಸೆ ಸಮಿತಿಯ ಸಮನ್ವಯ ಕಾರ್ಯ ಮಾಸಿಕ ವರದಿಗಳನ್ನು ಕಳುಹಿಸುವ ಕಾರ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸಭೆಗೆ ಮಾಹಿತಿ ಒದಗಿಸುವುದು, ಮಾಹಿತಿ ಹಕ್ಕು ಅಧಿನಿಯಮ 2005 ರನ್ವಯ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಇಂಧೀಕರಿಸುವುದು ಹಾಗೂ ಇಲಾಖೆಯ ಕಡತಗಳು ಮತ್ತು ಪತ್ರಗಳ ವಿಲೇವಾರಿ ಬಗ್ಗೆ ಮಾಸಿಕ ಸಭೆಯನ್ನು ಕರೆಯುವ ವಿಷಯವನ್ನು ನಿರ್ವಹಿಸುವರು ಹಾಗೂ ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸುವ ಇನ್ನೀತರ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಕಿರಿಯ ಸಹಾಯಕರು: ಇವರು ಇಲಾಖೆಯ ಶಾಖೆಗಳಲ್ಲಿ ರಿಜಿಸ್ಟರ್‌ಗಳ ನಿರ್ವಹಣೆ, ರವಾನೆ ಮತ್ತು ಪ್ರಕರಣಗಳನ್ನು ದಾಖಲಿಸುವುದು. ಇದರ ಜೊತೆಗೆ ಸಹಾಯಕನಿಗೆ ಸಹಕಾರ ನೀಡುವುದು ಮತ್ತು ಶಾಖಾಧಿಕಾರಿಗಳಿಗೆ ಪಟ್ಟಿಯನ್ನು ತಯಾರಿಸಿ ನೀಡುವುದು. ತಖ್ತೆವಾರು ವರದಿ ಸಲ್ಲಿಕೆ, ಜ್ಞಾಪನಗಳನ್ನು ಹೊರಡಿಸುವುದು ಮತ್ತು ಸ್ವಚ್ಛ ಪ್ರತಿಗಳನ್ನು ನೀಡುವುದು. ಅವರು ಪ್ರತಿ ದಿನವು ಶಾಖೆಗೆ ಬರುವ ಟಪಾಲುಗಳನ್ನು ಮತ್ತು ಕಡತಗಳನ್ನು ಸ್ವೀಕರಿಸಿ ಅವುಗಳನ್ನು ವಿಷಯ ನಿರ್ವಾಹಕರಿಗೆ ವಿತರಣೆ ಮಾಡುತ್ತಾರೆ, ಕಡತಗಳ ಚಲನವಲನವನ್ನು ನಿರ್ವಹಿಸುತ್ತಾರೆ. ಪತ್ರ ಮೊದಲಾದವುಗಳನ್ನು ಹೊರಡಿಸುವುದಕ್ಕಾಗಿ ಜವಾಬ್ದಾರರಾಗಿರುತ್ತಾರೆ. ಅವರು ಕರ್ನಾಟಕ ಸರ್ಕಾರದ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ-2: ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಆದೇಶಗಳನ್ನು ಹೊರಡಿಸಲು ಅಧಿಕೃತವಾದ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ-19ರನ್ವಯ ಕಾರ್ಯ ನಿರ್ವಹಣೆ ಸಂಬಂಧದಲ್ಲಿ ಹಾಗೂ ಶಿಸ್ತಿನ ಸಂಬಂಧದಲ್ಲಿ ತಮ್ಮ ಪ್ರಭಾರದಲ್ಲಿರುವ ಶಾಖೆಯ ಅಥವಾ ಶಾಖೆಗಳ ನಿಯಂತ್ರಣಾಧಿಕಾರವನ್ನು ಚಲಾಯಿಸುತ್ತಾರೆ. ಟಿಪ್ಪಣಿ ಮತ್ತು ಕರಡು ಪತ್ರದಲ್ಲಿ ವಿಳಂಬ ತಡೆಗಟ್ಟುವುದು, ಭಾಷಾಶೈಲಿ ಪರಿಶೀಲಿಸುವುದು. ಅತಿ ವಿಸ್ತಾರ ಭಾಷೆ ಬಳಸುವುದನ್ನು ಪರಿಶೀಲಿಸುವುದು ಅವರ ಕರ್ತವ್ಯವಾಗಿರುತ್ತದೆ. ಇವರು ಸಾಮಾನ್ಯವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಮತ್ತು ಸರ್ಕಾರದ ಜಂಟಿ / ಉಪ ಕಾರ್ಯದರ್ಶಿಯವರ ಆದೇಶಗಳನ್ವಯ ಕಾರ್ಯನಿರ್ವಹಿಸುತ್ತಾರೆ. ಇವರು ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005ರಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು, ಮಾಹಿತಿ ಹಕ್ಕು ಅಧಿನಿಯಮ,2005ರ ಪ್ರಕಾರ ಮಾಹಿತಿ ಹಕ್ಕು ಅಧಿಕಾರಿಯಾಗಿರುತ್ತಾರೆ. ಇವರಿಗೆ ಇಲಾಖೆಯ ಬಿ ಶಾಖೆ ಮತ್ತು ಸಿ ಶಾಖೆಯ ಶಾಖಾಧಿಕಾರಿಗಳು ನೆರವು ನೀಡುತ್ತಾರೆ.

<u>ಬಿ- ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:</u>

ಶಾಖಾಧಿಕಾರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ "ಬಿ" ಶಾಖೆಯ ಶಾಖಾಧಿಕಾರಿಯಾಗಿದ್ದು ಶಾಖೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳ ಸೇವಾ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ನಿರ್ವಹಿಸುವರು. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ /ಮಾರ್ಪಾಡು/ ತಿದ್ದುಪಡಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹಿರಿಯ ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು, ಜಂಟಿ ನಿರ್ದೇಶಕರು ವೃಂದಗಳಲ್ಲಿನ ಕರ್ತವ್ಯ ನಿರತ ಅಧಿಕಾರಿಗಳ ವರ್ಗಾವಣೆ, ಕಾಲಕಾಲದ ಮುಂಬಡ್ತಿ ಪ್ರಕ್ರಿಯೆಗಳು, ಅಧಿಕಾರಿಗಳ ವಿರುದ್ಧದ ದೂರುಗಳು, ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣಗಳು, ನ್ಯಾಯಾಲಯ ಪ್ರಕರಣಗಳು., ಅಧಿಕಾರಿಗಳ ಸಂಬಂಧಿತ ಪಾಸ್‌ಪೋರ್ಟ್ ಪಡೆಯಲು ಎನ್.ಓ.ಸಿ ನೀಡುವ, ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿಸುವ ಸಂಬಂಧ, ಇಲಾಖೆಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ B,C ಮತ್ತು D ವೃಂದದ ಲೋಕಾಯುಕ್ತ/ಇಲಾಖಾ ವಿಚಾರಣ ಪ್ರಕರಣಗಳು, ನ್ಯಾಯಾಲಯ ಪ್ರಕರಣಗಳು, ಮೇಲ್ಮನವಿಗಳು, ವರ್ಗಾವಣೆ ಪ್ರಸ್ತಾವನೆಗಳು ಮತ್ತು ವಿಷಯ ನಿರ್ವಾಹಕರು ಸಲ್ಲಿಸುವ ಎಲ್ಲಾ ಕಡತ/ ಪತ್ರಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವರು ಮತ್ತು ಮೇಲಾಧಿಕಾರಿಗಳ ಸೂಚನೆಯಂತೆ ಶಾಖೆಯ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

ಹಿರಿಯ ಸಹಾಯಕರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ/ಮಾರ್ಪಾಡು/ತಿದ್ದುಪಡಿ.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಈ ಕೆಳಕಂಡ ಗ್ರೂಪ್ –ಎ ವೃಂದಗಳ ಜೇಷ್ಠತಾ ಪಟ್ಟಿಯ ತಯಾರಿಕೆ.
    1. ಶಿಶು ಅಭಿವೃದ್ಧಿ ಯೋಜನಾಧಿಕಾರಿ,
    2. ಹಿರಿಯ ಸಹಾಯಕ ನಿರ್ದೇಶಕರು,
    3. ಉಪ ನಿರ್ದೇಶಕರು,
    4. ಜಂಟಿ ನಿರ್ದೇಶಕರು,
- ಮೇಲ್ಕಂಡ ವೃಂದಗಳಲ್ಲಿನ ಕರ್ತವ್ಯ ನಿರತ ಅಧಿಕಾರಿಗಳ ವರ್ಗಾವಣೆ, ಕಾಲಕಾಲದ ಮುಂಬಡ್ತಿ ಪ್ರಕ್ರಿಯೆಗಳು.
- ಮೇಲ್ಕಂಡ ವೃಂದಗಳಲ್ಲಿನ ಕರ್ತವ್ಯ ನಿರತ ಅಧಿಕಾರಿಗಳ ವಿರುದ್ಧದ ದೂರುಗಳು, ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣಗಳು.
- ಮೇಲ್ಕಂಡ ವೃಂದಗಳಲ್ಲಿನ ಕರ್ತವ್ಯ ನಿರತ ಅಧಿಕಾರಿಗಳ ಸಂಬಂಧಿತ ನ್ಯಾಯಾಲಯ ಪ್ರಕರಣಗಳು.
- ಮೇಲ್ಕಂಡ ವೃಂದಗಳಲ್ಲಿನ ಕರ್ತವ್ಯ ನಿರತ ಅಧಿಕಾರಿಗಳ ಪೈಕಿ ನಿಯೋಜನೆಗೆ ಒಳಪಟ್ಟ ಅಧಿಕಾರಿಗಳಿಗೆ ಅಫಿಸಿಯೇಶನ್ ಪ್ರಮಾಣ ಪತ್ರ ನೀಡುವ ಕುರಿತು.
- ಮೇಲ್ಕಂಡ ವೃಂದಗಳಲ್ಲಿನ ಕರ್ತವ್ಯ ನಿರತ ಅಧಿಕಾರಿಗಳ ಸಂಬಂಧಿತ ಪಾಸ್‌ಪೋರ್ಟ್ ಪಡೆಯಲು ಎನ್.ಓ.ಸಿ ನೀಡುವ, ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿಸುವ ಸಂಬಂಧ.
- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ/ಮಾರ್ಪಾಡು/ತಿದ್ದುಪಡಿ.
- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರೂಪ್-ಬಿ ವೃಂದದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ವರ್ಗಾವಣೆ, ಕಾಲಕಾಲದ ಮುಂಬಡ್ತಿ ಪ್ರಕ್ರಿಯೆಗಳು.
- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ವಿರುದ್ಧದ ದೂರುಗಳು, ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣಗಳು.
- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಸಂಬಂಧಿತ ನ್ಯಾಯಾಲಯ ಪ್ರಕರಣಗಳು.
- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವೃಂದ ಮತ್ತು ನೇಮಕಾತಿ ನಿಯಮಗಳ ಸಂಬಂಧ.
- ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಗೆ ಗ್ರೂಪ್-ಎ ವೃಂದದ ಹುದ್ದೆಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಗ್ರೂಪ್-ಎ ವೃಂದದ ಅಧಿಕಾರಿಗಳ ಸ್ಥಳನಿಯುಕ್ತಿ/ನಿಯೋಜನೆ ಕುರಿತು.
- ನಿಗಮದಲ್ಲಿನ, ಮಹಿಳಾ ಆಯೋಗದಲ್ಲಿನ, ಅಕಾಡೆಮಿಯಲ್ಲಿನ, ಬಾಲಭವನ ಸೊಸೈಟಿಯಲ್ಲಿನ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿನ ಅಂಗವಿಕಲರ ಅಧಿನಿಯಮ ಕಛೇರಿಯಲ್ಲಿನ, ಪ್ರಧಾನ ಕಛೇರಿಯಲ್ಲಿನ ಗ್ರೂಪ್-ಎ ವೃಂದದ ಕೆ.ಎ.ಎಸ್. ಶ್ರೇಣಿಯ ಹುದ್ದೆಗೆ ಸ್ಥಳನಿಯುಕ್ತಿ ಮತ್ತು ಇನ್ನಿತರ ವಿಷಯಗಳ ಕುರಿತು.
- ಮಾಹಿತಿ ಹಕ್ಕು ಸಂಬಂಧಿತ ಅರ್ಜಿಗಳ ಕುರಿತು.
- ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸುವ ಇನ್ನಿತರ ಕಾರ್ಯಗಳು.

ಸಹಾಯಕರು 1: 6 ವರ್ಷಕ್ಕೂ ಮೀರಿದ ಕಾಲಮಿತಿ ವೇತನ ಬಡ್ತಿ, ಸ್ವಯಂಚಾಲಿತ ವೇತನ ಬಡ್ತಿ, 20 ವರ್ಷದ 1ನೇ ಹೆಚ್ಚುವರಿ ವೇತನ ಬಡ್ತಿ, 25 ವರ್ಷದ 2ನೇ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ವಿಷಯಗಳು.

- ನಿವೃತ್ತಿ ನಂತರದ ಆರ್ಥಿಕ ಸೌಲಭ್ಯಗಳನ್ನು ಬಿಡುಗಡೆ ಮಾಡುವ ಕುರಿತಂತೆ ಮಹಾಲೇಖಪಾಲರೊಂದಿಗೆ ವ್ಯವಹರಿಸುವುದು, ನಿವೃತ್ತಿ ಸೌಲಭ್ಯಗಳ ಹಣ ಪಾವತಿಯ ವಿಳಂಬ ಅವಧಿಗೆ ಬಡ್ಡಿ ಪಾವತಿ ವಿಷಯ
- ಗ್ರೂಪ್ ಎ ವೃಂದದ ಅಧಿಕಾರಿಗಳ ಖಾಯಂಪೂರ್ವ ಸೇವಾವಧಿ ಘೋಷಣೆ ವಿಷಯ
- ಹೆಚ್ಚುವರಿ ಪ್ರಭಾರ ಭತ್ಯೆ ಮಂಜೂರಾತಿ ವಿಷಯಗಳು

- ವೈದ್ಯಕೀಯ ವೆಚ್ಚ ಮರುಪಾವತಿ ವಿಷಯಗಳು
- ಗ್ರೂಪ್ ಎ ವೃಂದದ ಮತ್ತು ಅದಕ್ಕೂ ಮೇಲ್ಪಟ್ಟ ಅಧಿಕಾರಿಗಳ ಆಸ್ತಿ ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ವಿಷಯಗಳು
- ಸಂವಿಧಾನದ ವಿಧಿ 371ಜೆ ಸಂಬಂಧಿಸಿದ ನೇಮಕಾತಿ ವಿಷಯಗಳು.
- ಇಲಾಖಾ ಹಿಂಬಾಕಿ ಹುದ್ದೆಗಳ ವಿಷಯಗಳು
- ಮಾಹಿತಿ ಹಕ್ಕು ಸಂಬಂಧಿತ ಅರ್ಜಿಗಳ ಕುರಿತು.
- ಪಿಂಚಣಿ ಉದ್ದೇಶಕ್ಕಾಗಿ ಅರ್ಹತಾದಾಯಕ ಸೇವೆ ಮಂಜೂರು ಮಾಡುವುದು.
- ಕಾಲಕಾಲಕ್ಕೆ ಮೇಲಾಧಿಕಾರಿಗಳು ಸೂಚಿಸುವ ಇನ್ನಿತರ ಕಾರ್ಯಗಳು.

ಸಹಾಯಕರು 2: ಇಲಾಖೆಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ B, C ಮತ್ತು D ವೃಂದದ ಲೋಕಾಯುಕ್ತ/ಇಲಾಖಾ ವಿಚಾರಣೆ ಪ್ರಕರಣಗಳು.

- B, C ಮತ್ತು D ವೃಂದದ ನ್ಯಾಯಾಲಯ ಪ್ರಕರಣಗಳು.
- B, C ಮತ್ತು D ವೃಂದದ ಮೇಲ್ಮನವಿಗಳು.
- B, C ಮತ್ತು D ವೃಂದದ ವರ್ಗಾವಣೆ ಪ್ರಸ್ತಾವನೆಗಳು.
- ವೃಂದ ಮತ್ತು ನೇಮಕಾತಿ ನಿಯಮಗಳು.
- ಜನ ಪ್ರತಿನಧಿಗಳು/ಸಾರ್ವಜನಿಕರಿಂದ ಸ್ವೀಕೃತವಾಗುವ ಮನವಿಗಳಿಗೆ ಸಂಬಂಧಿಸಿದಂತೆ ಕ್ರಮವಹಿಸುವುದು.
- ಮಾಹಿತಿ ಹಕ್ಕು ಸಂಬಂಧಿತ ಅರ್ಜಿಗಳ ಕುರಿತು.
- ಮೇಲಾಧಿಕಾರಿಗಳು ತಿಳಿಸುವ ಇತರೆ ಕರ್ತವ್ಯಗಳು.

ಕಿರಿಯ ಸಹಾಯಕರು: ಇವರು ಇಲಾಖೆಯ ಶಾಖೆಗಳಲ್ಲಿ ರಿಜಿಸ್ಟರ್‌ಗಳ ನಿರ್ವಹಣೆ, ರವಾನೆ ಮತ್ತು ಪ್ರಕರಣಗಳನ್ನು ದಾಖಲಿಸುವುದು. ಇದರ ಜೊತೆಗೆ ಸಹಾಯಕನಿಗೆ ಸಹಕಾರ ನೀಡುವುದು ಮತ್ತು ಶಾಖಾಧಿಕಾರಿಗಳಿಗೆ ಪಟ್ಟಿಯನ್ನು ತಯಾರಿಸಿ ನೀಡುವುದು. ತಖ್ತೆವಾರು ವರದಿ ಸಲ್ಲಿಕೆ, ಜ್ಞಾಪನಗಳನ್ನು ಹೊರಡಿಸುವುದು ಮತ್ತು ಸ್ವಚ್ಛ ಪ್ರತಿಗಳನ್ನು ನೀಡುವುದು. ಅವರು ಪ್ರತಿ ದಿನವು ಶಾಖೆಗೆ ಬರುವ ಟಪಾಲುಗಳನ್ನು ಮತ್ತು ಕಡತಗಳನ್ನು ಸ್ವೀಕರಿಸಿ ಅವುಗಳನ್ನು ವಿಷಯ ನಿರ್ವಾಹಕರಿಗೆ ವಿತರಣೆ ಮಾಡುತ್ತಾರೆ, ಕಡತಗಳ ಚಲನವಲನವನ್ನು ನಿರ್ವಹಿಸುತ್ತಾರೆ. ಪತ್ರ ಮೊದಲಾದವುಗಳನ್ನು ಹೊರಡಿಸುವುದಕ್ಕಾಗಿ ಜವಾಬ್ದಾರರಾಗಿರುತ್ತಾರೆ. ಅವರು ಕರ್ನಾಟಕ ಸರ್ಕಾರದ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005 ರ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ದಲಾಯತ್/ಜಮೇದಾರ: ಶಾಖೆಯ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು. ಕಡತ/ ಪತ್ರಗಳನ್ನು ಇತರೆ ಶಾಖೆಗಳಿಗೆ/ ವಿಭಾಗಗಳಿಗೆ ತಲುಪಿಸುವುದು. ಸಚಿವಾಲಯದ ಕೈಪಿಡಿಯಲ್ಲಿ ಗ್ರೂಪ್ ಡಿ ಹುದ್ದೆಗೆ ಸೂಚಿಸಿರುವಂತೆ ಹಾಗೂ ಮೇಲಾಧಿಕಾರಿಗಳು ಸೂಚಿಸಿರುವ ಇತರೆ ಕೆಲಸಗಳನ್ನು ನಿರ್ವಹಿಸುವುದು.

<u>ಸಿ- ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:</u>

ಶಾಖಾಧಿಕಾರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ "ಸಿ" ಶಾಖೆಯ ಶಾಖಾಧಿಕಾರಿಯಾಗಿದ್ದು ಶಾಖೆಯಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, ಕೇಂದ್ರ ಪ್ರಾಯೋಜಿತ ಯೋಜನೆಗಳು (ಸಿಪ್ಹಾ, ಐ.ಪಿ.ಎಸ್.ಆರ್.ಸಿ (ಎನ್‌ಎ.ಪಿ.ಎಸ್.ಆರ್.ಸಿ) ಡಿ.ಡಿ.ಆರ್.ಎಸ್ ಮತ್ತು ಐ.ಆರ್.ಸಿ.ಎ (ನಶಾ ಮುಕ್ತ ಭಾರತ ಅಭಿಯಾನ), ಸುಗಮ್ಯ ಭಾರತ ಅಭಿಯಾನ, ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳು, ಯಂತ್ರಚಾಲಿತ ದ್ವಿಚಕ್ರ ವಾಹನ ವಿತರಿಸುವ ಯೋಜನೆ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್ ಟಾಪ್ ನೀಡುವ ಯೋಜನೆ, ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಹಾಗೂ

ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ವಾರ್ಷಿಕ ಕ್ರಿಯಾ ಯೋಜನೆ, ಅಂಗವಿಕಲವಿಶ್ವ ಹಿರಿಯ ನಾಗರಿಕರ ದಿನಾಚರಣೆ, ವಯೋಶ್ರೇಷ್ಠ ಸಮ್ಮಾನ ಪ್ರಶಸ್ತಿ ಹಿರಿಯ ನಾಗರಿಕರ ಪಿಂಚಣಿಗೆ ಸಂಬಂಧಿಸಿದ ವಿಷಯಗಳು, ಪಾಲಕರ ಪೋಷಣೆ ಮತ್ತು ರಕ್ಷಣೆ ಕಾಯ್ದೆ 2007, ಅನುಪಾಲನ ಗೃಹ, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಹಗಲು ಯೋಗಕ್ಷೇಮ ಕೇಂದ್ರ, ಹಿರಿಯ ನಾಗರಿಕರ ವೃದ್ಧಾಶ್ರಮ ಹಾಗೂ ಹಿರಿಯ ನಾಗರಿಕರಿಗೆ ಸಂಬಂಧಿಸಿದ ಯಾವುದೇ ಇತರೆ ವಿಷಯಗಳನ್ನು ನಿರ್ವಹಿಸುವರು. ಸಿ ಶಾಖೆಯ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂದಿಸಿದ ವಿಷಯಗಳನ್ನು ನಿರ್ವಹಿಸುವುದು ಮತ್ತು ಮೇಲಧಿಕಾರಿಗಳ ಸೂಚನೆಯಂತೆ ಕಛೇರಿಯ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

ಹಿರಿಯ ಸಹಾಯಕರು: ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, ಕೇಂದ್ರ ಪ್ರಾಯೋಜಿತ ಯೋಜನೆಗಳು (ಸಿಪ್ಸಾ, ಐ.ಪಿ.ಎಸ್.ಆರ್.ಸಿ (ಎನ್ಎ.ಪಿ.ಎಸ್.ಆರ್.ಸಿ) ಡಿ.ಡಿ.ಆರ್.ಎಸ್ ಮತ್ತು ಐ.ಆರ್.ಸಿ.ಎ (ನಶಾ ಮುಕ್ತ ಭಾರತ ಅಭಿಯಾನ), ಸುಗಮ್ಯ ಭಾರತ ಅಭಿಯಾನ, ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳು, ಯಂತ್ರಚಾಲಿತ ದ್ವಿಚಕ್ರ ವಾಹನ ವಿತರಿಸುವ ಯೋಜನೆ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್ ಟಾಪ್ ನೀಡುವ ಯೋಜನೆ, ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಹಾಗೂ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ವಾರ್ಷಿಕ ಕ್ರಿಯಾ ಯೋಜನೆ.

ಸಹಾಯಕರು-1: ಅಂಗವಿಕಲ ವಿಶ್ವ ಹಿರಿಯ ನಾಗರಿಕರ ದಿನಾಚರಣೆ, ವಯೋಶ್ರೇಷ್ಠ ಸಮ್ಮಾನ ಪ್ರಶಸ್ತಿ ಹಿರಿಯ ನಾಗರಿಕರ ಪಿಂಚಣಿಗೆ ಸಂಬಂಧಿಸಿದ ವಿಷಯಗಳು, ಪಾಲಕರ ಪೋಷಣೆ ಮತ್ತು ರಕ್ಷಣೆ ಕಾಯ್ದೆ 2007, ಅನುಪಾಲನ ಗೃಹ, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಹಗಲು ಯೋಗಕ್ಷೇಮ ಕೇಂದ್ರ, ಹಿರಿಯ ನಾಗರಿಕರ ವೃದ್ಧಾಶ್ರಮ ಹಾಗೂ ಹಿರಿಯ ನಾಗರಿಕರಿಗೆ ಸಂಬಂಧಿಸಿದ ಯಾವುದೇ ಇತರೆ ವಿಷಯಗಳು (ರಾಜ್ಯ/ ಕೇಂದ್ರ ಸರ್ಕಾರದ).

ಸಹಾಯಕರು-2: ಅಂಗವಿಕಲ ವಿಕಲಚೇತನರ ಹುದ್ದೆ ಗುರುತಿಸುವಿಕೆ, ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಆಯುಕ್ತರ ಕಛೇರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು, ಡಿ.ಡಿ.ಆರ್.ಸಿ, ನ್ಯಾಷನಲ್ ಟ್ರಸ್ಟ್ ಅಧಿನಿಯಮ 1999, ವಿಕಲಚೇತನರ ಕ್ಯಾಂಪಸ್, ಆಧಾರ ಯೋಜನೆ , ಎನ್.ಹೆಚ್.ಎಫ್.ಡಿ.ಸಿ. ಬ್ರೈಲ್ ಪ್ರೆಸ್, ಶ್ರವಣ ದೋಷವುಳ್ಳ ಮಕ್ಕಳಿಗಾಗಿ ಉಪಗ್ರಹ ಯೋಜನೆ ಯು.ಡಿ.ಐ.ಡಿ, ವಿಶ್ವ ವಿಕಲಚೇತನರ ದಿನಾಚರಣೆ, ವಿಕಲಚೇತನರ ರಾಜ್ಯ/ ರಾಷ್ಟ್ರ, ಪ್ರಶಸ್ತಿ ವಿಕಲಚೇತನರ ಪಿಂಚಣಿ, ಶಿಶು ಕೇಂದ್ರಿಕೃತ ವಿಶೇಷ ಶೈಕ್ಷಣಿಕ ಯೋಜನೆ, ರಾಜ್ಯ ಅನುದಾನ ಸಂಹಿತೆ 1982 ರಡಿ ವ್ಯವಹರಿಸಲಾಗುವ ವಿಕಲಚೇತನ ಮಕ್ಕಳ ಶಾಲೆಯ ಹಾಗೂ ವಿಕಲಚೇತನರಿಗೆ ಸಂಬಂಧಿಸಿದ ಯಾವುದೇ ಇತರೆ ವಿಷಯಗಳು (ರಾಜ್ಯ/ ಕೇಂದ್ರ ಸರ್ಕಾರದ).

ದಲಾಯತ್/ಜಮೇದಾರ: ಶಾಖೆಯ ಆವರಣವನ್ನು ಸ್ವಚ್ಚವಾಗಿಟ್ಟುಕೊಳ್ಳುವುದು. ಕಡತ/ ಪತ್ರಗಳನ್ನು ಇತರೆ ಶಾಖೆಗಳಿಗೆ/ ವಿಭಾಗಗಳಿಗೆ ತಲುಪಿಸುವುದು. ಸಚಿವಾಲಯದ ಕೈಪಿಡಿಯಲ್ಲಿ ಗ್ರೂಪ್ ಡಿ ಹುದ್ದೆಗೆ ಸೂಚಿಸಿರುವಂತೆ ಹಾಗೂ ಮೇಲಾಧಿಕಾರಿಗಳು ಸೂಚಿಸಿರುವ ಇತರೆ ಕೆಲಸಗಳನ್ನು ನಿರ್ವಹಿಸುವುದು.

ಸರ್ಕಾರದ ಅಧೀನ ಕಾರ್ಯದರ್ಶಿ-3: ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಆದೇಶಗಳನ್ನು ಹೊರಡಿಸಲು ಅಧಿಕೃತವಾದ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ-19ರನ್ವಯ ಕಾರ್ಯ ನಿರ್ವಹಣೆ ಸಂಬಂಧದಲ್ಲಿ ಹಾಗೂ ಶಿಸ್ತಿನ ಸಂಬಂಧದಲ್ಲಿ ತಮ್ಮ ಪ್ರಭಾರದಲ್ಲಿರುವ ಶಾಖೆಯ ಅಥವಾ ಶಾಖೆಗಳ ನಿಯಂತ್ರಣಾಧಿಕಾರವನ್ನು ಚಲಾಯಿಸುತ್ತಾರೆ. ಟಿಪ್ಪಣಿ ಮತ್ತು ಕರಡು ಪತ್ರದಲ್ಲಿ ವಿಳಂಬ ತಡೆಗಟ್ಟುವುದು, ಭಾಷಾಶೈಲಿ ಪರಿಶೀಲಿಸುವುದು. ಅತಿ ವಿಸ್ತಾರ ಭಾಷೆ ಬಳಸುವುದನ್ನು ಪರಿಶೀಲಿಸುವುದು ಅವರ ಕರ್ತವ್ಯವಾಗಿರುತ್ತದೆ. ಇವರು ಸಾಮಾನ್ಯವಾಗಿ ಸರ್ಕಾರದ ಕಾರ್ಯದರ್ಶಿಯವರ ಮತ್ತು ಸರ್ಕಾರದ ಜಂಟಿ / ಉಪ ಕಾರ್ಯದರ್ಶಿಯವರ ಆದೇಶಗಳನ್ವಯ

ಕಾರ್ಯನಿರ್ವಹಿಸುತ್ತಾರೆ. ಇವರು ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005ರಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು, ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ಸಾರ್ವಜನಿಕ ಮಾಹಿತಿ ಹಕ್ಕು ಅಧಿಕಾರಿಯಾಗಿರುತ್ತಾರೆ. ಇವರಿಗೆ ಇಲಾಖೆಯ ಡಿ ಶಾಖೆ ಮತ್ತು ಇ ಶಾಖೆಯ ಶಾಖಾಧಿಕಾರಿಗಳು ನೆರವು ನೀಡುತ್ತಾರೆ.

<u>ಡಿ- ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:</u>

ಶಾಖಾಧಿಕಾರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ "ಡಿ" ಶಾಖೆಯ ಶಾಖಾಧಿಕಾರಿಯಾಗಿದ್ದು, ಶಾಖೆಯಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಂಬಂದಿಸಿದ ವಿಷಯಗಳನ್ನು ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳ ಸೂಚನೆಯಂತೆ ಕಛೇರಿಯ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

ಹಿರಿಯ ಸಹಾಯಕರು: ಸಮಗ್ರ ಮಕ್ಕಳ ರಕ್ಷಣಾ ಯೋಜನೆಗೆ ಸಂಬಂದಿಸಿದಂತೆ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಾಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು.

ಸಹಾಯಕರು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಂಬಂದಿಸಿದಂತೆ ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಾಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು.

<u>ಇ- ಶಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:</u>

ಶಾಖಾಧಿಕಾರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ "ಇ" ಶಾಖೆಯ ಶಾಖಾಧಿಕಾರಿಯಾಗಿದ್ದು ಶಾಖೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬಾಲ ಭವನ ಸೊಸೈಟಿ ಮತ್ತು ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಕ್ಕೆ ಸಂಬಂದಿಸಿದ ವಿಷಯಗಳನ್ನು ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳ ಸೂಚನೆಯಂತೆ ಕಛೇರಿಯ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

ಹಿರಿಯ ಸಹಾಯಕರು: ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಮತ್ತು ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಸಂಬಂದಿಸಿದಂತೆ ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು.

ಸಹಾಯಕರು: ಬಾಲ ಭವನ ಸೊಸೈಟಿ ಮತ್ತು ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಗೆ ಸಂಬಂಧಿಸಿದಂತೆ ಬರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಸೂಚನೆಯನುಸಾರ ಕಛೇರಿ ಕೆಲಸಗಳನ್ನು ನಿರ್ವಹಿಸುವುದು.

III. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಹಂತಗಳೂ ಸೇರಿದಂತೆ ತೀರ್ಮಾನವನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು :

ಎ) ತೀರ್ಮಾನವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಲಾಗುವಂತಹ ಕಾರ್ಯ ವಿಧಾನವು ಹೀಗಿದೆ:

- **ವಿಷಯ ನಿರ್ವಾಹಕರು:** ವಿಷಯ ನಿರ್ವಾಹಕರು ಶಾಖೆಯಲ್ಲಿ ಸ್ವೀಕೃತಿಯಾದ ಪತ್ರಗಳನ್ನು, ಆ ಪತ್ರಗಳಿಗೆ ಸಂಬಂಧಪಟ್ಟಂತೆ ಕಡತಗಳಿದ್ದಲ್ಲಿ, ಅದರೊಂದಿಗೆ ಸಲ್ಲಿಸುವುದು, ಇಲ್ಲದಿದ್ದಲ್ಲಿ ಹೊಸ

ಕಡತವನ್ನು ತೆರೆದು ಸಲ್ಲಿಸುವುದು. ಸ್ವೀಕೃತಿಗೆ ಸಂಬಂಧಪಟ್ಟಂತೆ ವಿಷಯವನ್ನು ಪರಿಶೀಲಿಸಿ ಕಡತವನ್ನು ಶಾಖಾಧಿಕಾರಿಗೆ ಸಲ್ಲಿಸುವುದು.

- **ಶಾಖಾಧಿಕಾರಿ:** ಶಾಖಾಧಿಕಾರಿಯು ವಿಷಯ ನಿರ್ವಾಹಕರು ಸಲ್ಲಿಸಿದ ಕಡತವನ್ನು ಪರಿಶೀಲಿಸುವರು. ಇವರು ಕಡತದಲ್ಲಿರುವ ಟಿಪ್ಪಣಿಯನ್ನು ಸಂಬಂಧಪಟ್ಟ ನಿಯಮಗಳಿಗನುಸಾರವಾಗಿ ಪರಿಶೀಲಿಸಿ, ಹೆಚ್ಚುವರಿ ಟಿಪ್ಪಣಿಯೊಂದಿಗೆ ಮೇಲಾಧಿಕಾರಿಗೆ ಸಲ್ಲಿಸುತ್ತಾರೆ. ಶಾಖಾಧಿಕಾರಿ ಕಡತವನ್ನು ಅಧೀನ ಕಾರ್ಯದರ್ಶಿ/ ಜಂಟಿ / ಉಪ ಕಾರ್ಯದರ್ಶಿರವರಿಗೆ ಅನುಮೋದನೆಗಾಗಿ ಸಲ್ಲಿಸುವುದು. ತುರ್ತು ಮತ್ತು ಮುಖ್ಯ ಸ್ವೀಕೃತಿಗಳನ್ನು ವಿಷಯ ನಿರ್ವಾಹಕರಿಗೆ ರವಾನಿಸದೆ ತಾವೇ ಸ್ವತಃ ಸಲ್ಲಿಸುವುದು ಶಾಖಾಧಿಕಾರಿ/ಅಧೀನ ಕಾರ್ಯದರ್ಶಿಯವರಿಗೆ ಅಧಿಕಾರವಿದೆ.

- **ಸರ್ಕಾರದ ಅಧೀನ ಕಾರ್ಯದರ್ಶಿ:** ಇವರು ಪ್ರಸ್ತಾವನೆ ಕುರಿತು ಕೈಗೊಳ್ಳಬೇಕಾದ ಕ್ರಮವನ್ನು ಸೂಚಿಸುತ್ತಾರೆ ಮತ್ತು ಇರುವಂತಹ ನಿಯಮಗಳು ಅಥವಾ ಅಧಿನಿಯಮಗಳ ಉಪಬಂಧಗಳು, ಪೂರ್ವ ನಿದರ್ಶನ ಪ್ರಕರಣಗಳ ಹಿನ್ನಲೆಯಲ್ಲಿ ಅದರ ಅರ್ಥವನ್ನು ವಿವರಿಸುತ್ತಾರೆ ಅಥವಾ ನಿಯೋಜಿತವಾದ ಅಧಿಕಾರಗಳ ಮೇರೆಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

- **ಸರ್ಕಾರದ ಜಂಟಿ / ಉಪ ಕಾರ್ಯದರ್ಶಿ:** ಇವರು ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ, ಈ ಸಂಬಂಧ ಕೈಗೊಳ್ಳಬೇಕಾದ ಅಂತಿಮ ಕ್ರಮದ ಅನುಮೋದನೆಗಾಗಿ ಸರ್ಕಾರದ ಕಾರ್ಯದರ್ಶಿಗಳಿಗೆ ಕಡತವನ್ನು ಸಲ್ಲಿಸುತ್ತಾರೆ ಅಥವಾ ನಿಯೋಜಿತವಾದ ಅಧಿಕಾರಗಳ ಮೇರೆಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

- **ಸರ್ಕಾರದ ಕಾರ್ಯದರ್ಶಿ:** ಇವರು ನಿಯೋಜಿತ ಅಧಿಕಾರಿಗಳ ಮೇರೆಗೆ ಪ್ರಸ್ತಾವನೆ ಕುರಿತಂತೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಅವಶ್ಯವಿದ್ದಲ್ಲಿ, ಇತರ ಇಲಾಖೆಗಳೊಂದಿಗೆ ಸಮಾಲೋಚಿಸಿ ತೀರ್ಮಾನ ತೆಗೆದುಕೊಂಡು ಕಡತವನ್ನು ಹಿಂದಿರುಗಿಸುವರು. ಮತ್ತು ಅಗತ್ಯವಾದರೆ, ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಶೀಘ್ರ ನೀತಿಗಳಿಗೆ ಸಂಬಂಧಪಟ್ಟ ವಿಷಯ ಮತ್ತು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977ರನ್ವಯ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ತಮ್ಮ ಹಂತದಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೆ ಹಾಗೂ ಸಂದರ್ಭಾನುಸಾರ, ಸಚಿವರಿಗೆ ಸಲ್ಲಿಸಬೇಕಾದ ವಿಷಯಗಳಲ್ಲಿ ಅಂತಿಮ ತೀರ್ಮಾನಕ್ಕಾಗಿ ಕಡತವನ್ನು ಸಲ್ಲಿಸುತ್ತಾರೆ. ಇಲಾಖೆಯ ಮಾನ್ಯ ಸಚಿವರಿಗೆ ಅಥವಾ ಸರ್ಕಾರಕ್ಕೆ ಅಂತಿಮ ಆದೇಶಗಳಿಗಾಗಿ ಕಡತವನ್ನು ಸಲ್ಲಿಸಿರುತ್ತಾರೆ.

(ಬಿ) ಮೇಲ್ವಿಚಾರಣೆಯ ಹಂತಗಳು:

ವಿಷಯ ನಿರ್ವಾಹಕ → ಶಾಖಾಧಿಕಾರಿ → ಸರ್ಕಾರದ ಅಧೀನ ಕಾರ್ಯದರ್ಶಿ → ಸರ್ಕಾರದ ಜಂಟಿ/ ಉಪ ಕಾರ್ಯದರ್ಶಿ → ಸರ್ಕಾರದ ಪ್ರಧಾನ ಕಾರ್ಯದರ್ಶಿ.

IV. ಪ್ರಕಾರ್ಯಗಳ ನಿರ್ವಹಣೆಗಾಗಿ ರೂಪಿಸಲಾದ ಸೂತ್ರಗಳು :

- **ದಲಾಯತ್:** ಆತನು ತನಗೆ ವಹಿಸಿಕೊಡಲಾದ ಕೆಲಸಗಳನ್ನು ಆ ದಿನದಂದೇ ನಿರ್ವಹಿಸಬೇಕು.

- **ಕಿರಿಯ ಸಹಾಯಕ:** ಆತನು ತನಗೆ ವಹಿಸಿಕೊಡಲಾದ ಕೆಲಸಗಳನ್ನು ಆ ದಿನದಂದೇ ನಿರ್ವಹಿಸಬೇಕು.

- **ವಿಷಯ ನಿರ್ವಾಹಕರು:** ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ) 2005ರ ಪ್ರಕಾರ ಕಡತಗಳನ್ನು/ಟಪಾಲುಗಳನ್ನು 5 ದಿನಗಳೊಳಗೆ ಸಲ್ಲಿಸಬೇಕು.

ಶಾಖಾಧಿಕಾರಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸರ್ಕಾರದ ಉಪ ಕಾರ್ಯದರ್ಶಿ } ಆದ್ಯತೆಯ ಮೇಲೆ ಕೆಲಸವನ್ನು ನಿರ್ವಹಿಸಬೇಕು
ಸರ್ಕಾರದ ಜಂಟಿ ಕಾರ್ಯದರ್ಶಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ತವ್ಯ ನಿರ್ವಹಿಸುವಲ್ಲಿ ಅನುಸರಿಸಬೇಕಾದ ಮಾದರಿ: ಸಚಿವಾಲಯ ಕೈಪಿಡಿ ಮತ್ತು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ಪ್ರಕಾರ ಕಡತ ವಿಲೇವಾರಿ ಮಾಡುವಲ್ಲಿ ಸಚಿವಾಲಯದ ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಕಡತ ವಿಲೇವಾರಿ ಮಾಡುವಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ವಿವಿಧ ಶಾಸನ, ನಿಯಮಗಳು, ಸೂಚನೆಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತದೆ.

V. ಈ ಕೆಳಗೆ ಸೂಚಿಸಿದ ಕಾಯ್ದೆ/ನಿಯಮಗಳು/ಕೈಪಿಡಿ ದಾಖಲೆಗಳನ್ನು ಇಲಾಖೆಯ ಕಾರ್ಯವನ್ನು ನಿರ್ವಹಿಸಲು ಉಪಯೋಗಿಸಲಾಗುತ್ತಿದೆ :

1) ಸಚಿವಾಲಯ ಕೈಪಿಡಿ
2) ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳು 1977
3) ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977
4) ಕರ್ನಾಟಕ ಸಿವಿಲ್ ಸೇವಾ ನಿಯಮಗಳು
5) ಕರ್ನಾಟಕ ಆರ್ಥಿಕ ಸಂಹಿತೆ
6) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1977
7) ವರದಕ್ಷಿಣೆ ನಿಷೇಧ ಕಾಯ್ದೆ 1961
8) ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಅಧಿನಿಯಮ, 2000
9) ಅನೈತಿಕ ವ್ಯವಹಾರಗಳ (ತಡೆಗಟ್ಟುವುದು) ಅಧಿನಿಯಮ 1957
10) ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005
11) ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ 1995
12) ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇವೆಗಳು (ನೇಮಕಾತಿ) ನಿಯಮಗಳು 1991.
13) ಕರ್ನಾಟಕ ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಸೇವೆಗಳು (ನೇಮಕಾತಿ) ನಿಯಮಗಳು 2004
14) ಅಂಗವಿಕಲರ ಅಧಿನಿಯಮ, 1995
15) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಅಧಿನಿಯಮ, 2005
16) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995
17) ಇಲಾಖಾ ಬಡ್ತಿ ಸಮಿತಿಗಳು.
18) ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977
19) ಕರ್ನಾಟಕ ಸಿವಿಲ್ ಸೇವಾ (ಪ್ರೊಬೆಷನ್) ನಿಯಮಗಳು, 1977
20) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಮೀಸಲಾತಿ ರೋಸ್ಟರ್.
21) ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 1994
22) ಕರ್ನಾಟಕ ಲೋಕಸೇವಾ ಆಯೋಗ (ಸಮಾಲೋಚನೆ) ವಿನಿಯಮ, 2000

23) ಸೇವೆಯಲ್ಲಿರುವಾಗ ಮೃತರಾದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪ ಆಧಾರದಲ್ಲಿ ನೇಮಕಾತಿ.
24) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957
25) ಕರ್ನಾಟಕ ಸಿವಿಲ್ ಸೇವಾ (ನಡವಳಿಕೆ) ನಿಯಮಗಳು, 1977
26) ಕರ್ನಾಟಕ ಸರ್ಕಾರಿ (ವ್ಯವಹಾರ ಹಂಚಿಕೆ) ನಿಯಮಗಳು 1977
27) ಕರ್ನಾಟಕ ಕಾರ್ಯನಿರ್ವಹಣಾ ನಿಯಮಗಳು 1977
28) ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು 1963
29) ಕರ್ನಾಟಕ ಸಿವಿಲ್ ಸೇವಾ ನಿಯಮಗಳು.

VI. ಹೊಂದಿರುವ ಅಥವಾ ಅದರ ನಿಯಂತ್ರದಲ್ಲಿರುವ ದಾಸ್ತಾವೇಜುಗಳ ಪ್ರವರ್ಗಗಳ ವಿವರಣೆ: ಇಲಾಖೆಗೆ ಸಂಬಂಧಪಡುವ ಎಲ್ಲಾ ಕಡತಗಳನ್ನು ಇಲಾಖಾ ಸಚಿವಾಲಯವು ನಿರ್ವಹಿಸುತ್ತದೆ ಮತ್ತು ಪರಿಷ್ಕರಿಸುತ್ತದೆ.

ಈ ಕೆಳಗೆ ಸೂಚಿಸಿದ ದಾಖಲೆಗಳನ್ನು ಇರಿಸಿಕೊಳ್ಳಲಾಗಿದೆ :
ಎ) ಸರ್ಕಾರಿ ಆದೇಶಗಳು
ಬಿ) ಅಧಿಸೂಚನೆಗಳು
ಸಿ) ನಿಯಮಗಳು
ಡಿ) ಕಾಯ್ದೆಗಳು

VII. ಕಾರ್ಯನೀತಿಯ ರಚನಾ ನೀತಿ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚನೆ ನಡೆಸುವುದಕ್ಕಾಗಿ ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತೆ ಯಾವುದೇ ವ್ಯವಸ್ಥೆಯ ವಿವರಗಳು: ರೀತಿ ನೀತಿಗಳನ್ನು ರಚಿಸುವಲ್ಲಿ ಅಥವಾ ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕರೊಂದಿಗೆ ಅಥವಾ ಸಾರ್ವಜನಿಕ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ವ್ಯವಸ್ಥೆ ಇರುವುದಿಲ್ಲ. ಕಾಯ್ದೆ ಅಥವಾ ನಿಯಮಗಳಲ್ಲಿ ಪೂರ್ವಭಾವಿಯಾಗಿ ಕರಡು ಕಾಯ್ದೆ ಅಥವಾ ನಿಯಮ ಪ್ರಕಟಿಸಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ನಂತರ ಅಂತಿಮ ಕಾಯ್ದೆ ಅಥವಾ ನಿಯಮಗಳನ್ನು ರೂಪಿಸಬೇಕೆಂದು ಉಪಬಂಧಗಳು ಇದ್ದಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಸದರಿ ವಿಧಾನವನ್ನು ಅನುಸರಿಸಲಾಗುವುದು.

VIII. ಸಲಹೆಯ ಉದ್ದೇಶಕ್ಕಾಗಿ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಣೆ :

1. ಅಂಗವಿಕಲರ ಅಧಿನಿಯಮ 1955ರಡಿಯಲ್ಲಿ
   ಅ) ನೋಡಲ್ ಸಮಿತಿ
   ಆ) ರಾಜ್ಯ ಸಮನ್ವಯ ಸಮಿತಿ
   ಇ) ಕಾರ್ಯಕಾರಿ ಸಮಿತಿ
2. ಕರ್ನಾಟಕ ರಾಜ್ಯ ಮಹಿಳಾ ಆಯೋಗ
3. ಜವಾಹರ ಬಾಲಭವನ ಸೊಸೈಟಿ
4. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ
5. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ

6. ಕರ್ನಾಟಕ ಬಾಲ ವಿಕಾಸ ಅಕಾಡೆಮಿ
7. ಶ್ರೀಮತಿ ಯಶೋಧರಮ್ಮ ದಾಸಪ್ಪ ಇವರ ಜನ್ಮ ಶತಮಾನೋತ್ಸವ ಆಚರಣೆಗಾಗಿ ಉನ್ನತ ಮಟ್ಟದ ಸಮಿತಿ
8. ಮಕ್ಕಳ ಕಲ್ಯಾಣ ಸಮಿತಿ
9. ಬಾಲ್ಯವೇಶ್ಯಾ ಪದ್ಧತಿ ನಿರ್ಮೂಲನೆಗಾಗಿ ರಾಜ್ಯಮಟ್ಟದ ಸಲಹಾ ಸಮಿತಿ
10. ರಾಜ್ಯಮಟ್ಟದ ದತ್ತು ಸಲಹಾ ಸಮಿತಿ
11. ಅನಾಥಾಲಯ ಹಾಗೂ ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಕಾಯ್ದೆಯಡಿ ನಿಯಂತ್ರಣಾ ಮಂಡಳಿ
12. ಮಾದಕ ವಸ್ತುಗಳ ಸೇವನೆ ನಿಷೇಧಕ್ಕಾಗಿ ರಾಜ್ಯಮಟ್ಟದ ಸಮನ್ವಯ ಸಮಿತಿ.

IX. ಅಧಿಕಾರಿಗಳು ಮತ್ತು ನೌಕರರ ನಿರ್ದೇಶಿಕೆ:

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಪದನಾಮ ಶ್ರೀ/ ಶ್ರೀಮತಿ	ದೂರವಾಣಿ ಸಂಖ್ಯೆ ಕಛೇರಿ/ನಿವಾಸ
1.	ಸರ್ಕಾರದ ಕಾರ್ಯದರ್ಶಿ	**080-22032562**
2.	ಬಿ.ಎಂ ಚಂದ್ರಶೇಖರ್ ಸರ್ಕಾರದ ಜಂಟಿ ಕಾರ್ಯದರ್ಶಿ	**080-22032577**
3.	ಕೆ.ಎನ್.ಮೂರ್ತಿ ಸರ್ಕಾರದ ಉಪ ಕಾರ್ಯದರ್ಶಿ	**080-22032191**
4.	ಟಿ.ಜಿ.ಸರ್ವಮಂಗಳ ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ	**080-22032562**
5.	ನಿರ್ಮಲಾ ಎಸ್. ಖಟಾವಕರ್ ಸರ್ಕಾರದ ಅಧೀನ ಕಾರ್ಯದರ್ಶಿ-1	**080-22032931**
6.	ಜಿ.ಹೆಚ್. ಸರೋಜಮ್ಮ ಸರ್ಕಾರದ ಅಧೀನ ಕಾರ್ಯದರ್ಶಿ-2	**080-22032240**
7.	ರಶ್ಮಿ ಎಂ.ಎಸ್. ಸರ್ಕಾರದ ಅಧೀನ ಕಾರ್ಯದರ್ಶಿ-2	**080-22032240**
8.	ಆರ್. ಲತಾ ಸರ್ಕಾರದ ಅಧೀನ ಕಾರ್ಯದರ್ಶಿ-3	**080-22032931**
9.	ಯು. ಭೀಮಣ್ಣ ಶಾಖಾಧಿಕಾರಿ- ಎ	**080-22032152**
10.	ಭವ್ಯ ಎಂ.ಜೆ. ಶಾಖಾಧಿಕಾರಿ- ಬಿ	**080-22032151**
11.	ವನಿತಾ ಕೆ. ಶಾಖಾಧಿಕಾರಿ- ಬಿ	**080-22032151**
12.	ವನಲಕ್ಷ್ಮೀ ಸಿ.ಬಿ. ಶಾಖಾಧಿಕಾರಿ-ಸಿ	**080-22032816**
13.	ಜಬೀನ್ ತಾಜ್. ಶಾಖಾಧಿಕಾರಿ- ಡಿ	**080-22032588**
14.	ಪ್ರಕಾಶ್ ಹೆಚ್.ಎನ್. ಶಾಖಾಧಿಕಾರಿ- ಇ	**080-22032574**

15.	ಲಕ್ಷ್ಮೀದೇವಿ.ಆರ್ ಸ್ವೀಮರ ಮತ್ತು ರವಾನೆ ಶಾಖೆ	**080-22032306**
16.	ಅಮೃತ ಶೀಘ್ರಲಿಪಿಗಾರರು, ಕಾರ್ಯದರ್ಶಿರವರ ಆಪ್ತ ಶಾಖೆ	----
17.	ದೀಪಾ ಆರ್. ಶೀಘ್ರಲಿಪಿಗಾರರು, ಜಂಟಿ ಕಾರ್ಯದರ್ಶಿರವರ ಆಪ್ತ ಸಹಾಯಕರು	----
18.	ವಿದ್ಯಾಶ್ರೀ ಎಸ್.ಡಿ. ಹಿರಿಯ ಸಹಾಯಕರು (ಶಾಖೆ-ಎ)	----
19.	ಮನೋಹರ ಎಂ. ಸಹಾಯಕರು (ಶಾಖೆ-ಎ)	----
20.	ಕೃಷ್ಣಕುಮಾರ್ ಎಸ್ ಸಹಾಯಕರು (ಶಾಖೆ-ಎ)	----
21.	ಪದ್ಮಶ್ರೀ ಎಸ್. ಪೋತದಾರ್ ಕಿರಿಯ ಸಹಾಯಕರು	----
22.	ನಾಗರಾಜ ಎಂ.ಜಿ ಹಿರಿಯ ಸಹಾಯಕರು (ಶಾಖೆ-ಬಿ)	----
23.	ಪುಟ್ಟೇಗೌಡ ಹೆಚ್.ಸಿ. ಸಹಾಯಕರು (ಶಾಖೆ-ಬಿ)	----
24.	ಪ್ರವೀಣ್ ಬಸವರಾಜ್ ಜಾಲಿಬೇರಿ ಸಹಾಯಕರು (ಶಾಖೆ-ಬಿ)	----
25.	ಶಶಿಕುಮಾರ್ ಮಾವರ್‌ಕರ್ ಸಹಾಯಕರು (ಶಾಖೆ-ಬಿ)	----
26.	ಅನನ್ಯ. ಎಸ್. ಕಿರಿಯ ಸಹಾಯಕರು (ಶಾಖೆ- ಬಿ)	----
27.	ಸತೀಶ್ ಆರ್. ಹಿರಿಯ ಸಹಾಯಕರು (ಶಾಖೆ-ಸಿ)	----
28.	ಕೌಸಲ್ಯ ವಿ. ಸಹಾಯಕರು (ಶಾಖೆ-ಸಿ)	----
29.	ಮಾಯವ್ವ ಮಾದೇವ ಸನದಿ ಸಹಾಯಕರು (ಶಾಖೆ-ಸಿ)	----
30.	ಮೋಹನರಾಜು ಹಿರಿಯ ಸಹಾಯಕರು (ಶಾಖೆ-ಡಿ)	----
31.	ಅಜಿತ್ ಮಗದುಮ್ ಸಹಾಯಕರು (ಶಾಖೆ-ಡಿ)	----
32.	ಲೇಖಾ ಬಿ.ಜಿ ಹಿರಿಯ ಸಹಾಯಕರು (ಶಾಖೆ-ಇ)	----
33.	ಭವ್ಯ ಆರ್. ಸಹಾಯಕರು (ಶಾಖೆ-ಇ)	----
34.	ಪ್ರವೀಣ್ ಬಸವರಾಜ್ ಜಾಲಿಬೇರಿ ಸಹಾಯಕರು (ಶಾಖೆ-ಸ್ವೀಮರ)	----

34.	ಸಂಜಯ ಕುಮಾರ ಎಸ್. ಕಿರಿಯ ಸಹಾಯಕರು (ಶಾಖೆ- ಸ್ವೀಮರ)	----
35.	ಆನಂದ್ ಹೆಚ್.ಎಸ್. ಹಿರಿಯ ವಾಹನ ಚಾಲಕರು	----
36.	ಜವರಯ್ಯ ಹೆಚ್. ಗ್ರೂಪ್-ಡಿ (ಕಾರ್ಯದರ್ಶಿರವರ ಆಪ್ತ ಶಾಖೆ)	----
37.	ಇಂದಿರಾ ಗ್ರೂಪ್-ಡಿ (ಶಾಖೆ-ಸಿ)	----

X. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು :

ಕ್ರ. ಸಂ.	ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ	ವೇತನ ಶ್ರೇಣಿ ರೂ.ಗಳಲ್ಲಿ	ಮೂಲ ವೇತನ ರೂ. ಗಳಲ್ಲಿ
1	ಸರ್ಕಾರದ ಪ್ರಧಾನ ಕಾರ್ಯದರ್ಶಿ	-	-
2	ಬಿ.ಎಂ. ಚಂದ್ರಶೇಖರ್ ಸರ್ಕಾರದ ಜಂಟಿ ಕಾರ್ಯದರ್ಶಿ	90,500-1,23,300	94,900/-
3	ಕೆ.ಎನ್. ಮೂರ್ತಿ ಸರ್ಕಾರದ ಉಪ ಕಾರ್ಯದರ್ಶಿ	74,400-1,09,600	86,100/-
4	ಟಿ.ಜಿ. ಸರ್ವಮಂಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ	52,650-97,100	81,350/-
5	ನಿರ್ಮಲಾ ಎಸ್. ಖಟಾವಕರ್ ಸರ್ಕಾರದ ಅಧೀನ ಕಾರ್ಯದರ್ಶಿ-1	52,650-97,100	62,600/-
6	ಜಿ.ಹೆಚ್. ಸರೋಜಮ್ಮ ಸರ್ಕಾರದ ಅಧೀನ ಕಾರ್ಯದರ್ಶಿ-2	52,650-97,100	56,600/-
7	ರಶ್ಮಿ ಎಂ.ಎಸ್. ಸರ್ಕಾರದ ಅಧೀನ ಕಾರ್ಯದರ್ಶಿ-2	52,650-97,100	62,600/-
8	ಆರ್. ಲತಾ ಸರ್ಕಾರದ ಅಧೀನ ಕಾರ್ಯದರ್ಶಿ-3	52,650-97,100	62,600/-
9	ಉಪ್ಪಾರ್ ಭೀಮಣ್ಣ ಶಾಖಾಧಿಕಾರಿ- ಎ	43,100-83,900	45,300/-
10	ಭವ್ಯ ಎಂ.ಜೆ. ಶಾಖಾಧಿಕಾರಿ- ಬಿ	43,100-83,900	48,900/-
11	ವನಿತಾ ಕೆ. ಶಾಖಾಧಿಕಾರಿ- ಬಿ	43,100-83,900	45,300/-
12	ವನಲಕ್ಷ್ಮೀ ಸಿ.ಬಿ. ಶಾಖಾಧಿಕಾರಿ- ಸಿ	43,100-83,900	48,900/-

13	ಜಬೀನ್ ತಾಜ್. ಶಾಖಾಧಿಕಾರಿ- ಡಿ	43,100-83,900	48,900/-
14	ಪ್ರಕಾಶ್ ಹೆಚ್.ಎನ್. ಶಾಖಾಧಿಕಾರಿ- ಇ	43,100-83,900	46,400/-
15	ಲಕ್ಷ್ಮೀದೇವಿ ಆರ್. ಸ್ವೀಮರ ಮತ್ತು ರವಾನೆ ಶಾಖೆ	43,100-83,900	46,400/-
16	ಅಮೃತ ಶೀಘ್ರಲಿಪಿಗಾರರು, ಕಾರ್ಯದರ್ಶಿರವರ ಆಪ್ತ ಶಾಖೆ	30,350-58,250	35,150/-
17	ದೀಪಾ ಆರ್. ಶೀಘ್ರಲಿಪಿಗಾರರು ಜ.ಕಾ-1 ರವರ ಆಪ್ತ ಶಾಖೆ	30,350-58,250	36,000/-
18	ವಿದ್ಯಾಶ್ರೀ ಎಸ್.ಡಿ. ಹಿರಿಯ ಸಹಾಯಕರು (ಶಾಖೆ-ಎ)	37,900-70,850	37,500/-
19	ನಾಗರಾಜ ಎಂ.ಜಿ ಹಿರಿಯ ಸಹಾಯಕರು (ಶಾಖೆ-ಬಿ)	37,900-70,850	42,000/-
20	ಸತೀಶ್ ಆರ್. ಹಿರಿಯ ಸಹಾಯಕರು (ಶಾಖೆ-ಸಿ)	37,900-70,850	42,000/-
21	ಮೋಹನರಾಜು ಹಿರಿಯ ಸಹಾಯಕರು (ಶಾಖೆ-ಡಿ)	37,900-70,850	42,000/-
22	ಲೇಖಾ ಬಿ.ಜಿ ಹಿರಿಯ ಸಹಾಯಕರು (ಶಾಖೆ-ಇ)	37,900-70,850	42,000/-
23	ಮನೋಹರ ಎಂ. ಸಹಾಯಕರು (ಶಾಖೆ-ಎ)	30,350-58,250	32,600/-
24	ಕೃಷ್ಣಕುಮಾರ್ ಎಸ್ ಸಹಾಯಕರು (ಶಾಖೆ-ಎ)	30,350-58,250	33,450/-
25	ಪದ್ಮಶ್ರೀ ಎಸ್. ಪೋತದಾರ್ ಕಿರಿಯ ಸಹಾಯಕರು (ಶಾಖೆ-ಎ)	21,400-42,000	21,900/-
25	ಪುಟ್ಟೇಗೌಡ ಹೆಚ್.ಸಿ. ಸಹಾಯಕರು (ಶಾಖೆ-ಬಿ)	30,350-58,250	36,000/-
26	ಶಶಿಕುಮಾರ್ ಮಾವರಕರ್ ಸಹಾಯಕರು (ಶಾಖೆ-ಬಿ)	30,350-58,250	31,850/-
27	ಪ್ರವೀಣ್ ಬಸವರಾಜ್ ಜಾಲಿಬೇರಿ ಸಹಾಯಕರು (ಶಾಖೆ-ಬಿ)	30,350-58,250	31,100/-
28	ಅನನ್ಯ. ಎಸ್. ಕಿರಿಯ ಸಹಾಯಕರು (ಶಾಖೆ- ಬಿ)	21,400-42,000	22,400/-
29	ಕೌಸಲ್ಯ. ವಿ ಸಹಾಯಕರು (ಶಾಖೆ-ಸಿ)	30,350-58,250	36,000/-
30	ಮಾಯವ್ವ ಮಾದೇವ ಸನದಿ ಸಹಾಯಕರು (ಶಾಖೆ-ಸಿ)	30,350-58,250	31,850/-

31	ಅಜಿತ್ ಮಗದುಮ್ ಸಹಾಯಕರು (ಶಾಖೆ-ಡಿ)	30,350-58,250	31,100/-
32	ಭವ್ಯ ಆರ್. ಸಹಾಯಕರು (ಶಾಖೆ-ಇ)	30,350-58,250	31,100/-
33	ಪ್ರವೀಣ್ ಬಸವರಾಜ್ ಜಾಲಿಬೇರಿ ಸಹಾಯಕರು (ಶಾಖೆ- ಸ್ವೀಮರ)	30,350-58,250	31,100/-
34	ಸಂಜಯಕುಮಾರ್ ಎಸ್. ಕಿರಿಯ ಸಹಾಯಕರು (ಶಾಖೆ-ಸ್ವೀಮರ)	21,400-42,000	21,900/-
35	ಆನಂದ್ ಹೆಚ್.ಎಸ್. ಹಿರಿಯ ವಾಹನ ಚಾಲಕರು	27,650-52,650	34,300/-
36	ಜವರಯ್ಯ ಹೆಚ್. ದಲಾಯತ್ ಕಾರ್ಯದರ್ಶಿರವರ ಆಪ್ತ ಶಾಖೆ	17,000-28950	34,300/-
37	ಇಂದಿರಾ ದಲಾಯತ್ (ಶಾಖೆ-ಸಿ)	17,000-28950	24,600/-

XI. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ವಿವಿಧ ಯೋಜನಾವಾರು ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ಅನುದಾನದ ವಿವರಗಳು:

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	**ಲೆಕ್ಕ ಶೀರ್ಷಿಕೆ**	**ಯೋಜನೆ**	**ಪರಿಷ್ಕೃತ ಆಯವ್ಯಯ ಅಂದಾಜು 2023-24**
I. ಕೇಂದ್ರ ಪುರಸ್ಕೃತ ಯೋಜನೆಗಳು (ರಾಜ್ಯ ವಲಯ ಯೋಜನೆ)			
1	2235-02-102-0-13	ಉದ್ಯೋಗಿ ಮಾತೆಯರ ಮಕ್ಕಳಿಗಾಗಿ ಶಿಶು ವಿಹಾರಗಳು (ಕೇಂದ್ರದ ಪಾಲು)	560.98
2	2235-02-102-0-21	ಉದ್ಯೋಗಿ ಮಾತೆಯರ ಮಕ್ಕಳಿಗಾಗಿ ಶಿಶು ವಿಹಾರಗಳು (ರಾಜ್ಯದ ಪಾಲು)	107.12
3	2235-02-102-0-41	ಬೇಟಿ ಬಚಾವೋ ಬೇಟಿ ಪಡಾವೋ	750.00
4	2235-02-102-0-42	ಒನ್ ಸ್ಟಾಪ್ ಸೆಂಟರ್ (ಕೇಂದ್ರದ ಪಾಲು)	533.39
5	2235-02-102-0-43	ಪೋಷಣ ಅಭಿಯಾನ (ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) (ಕೇಂದ್ರದ ಪಾಲು)	7975.63

6	2235-02-102-0-47	ಪೋಷಣ ಅಭಿಯಾನ (ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) (ರಾಜ್ಯದ ಪಾಲು)	5329.37
7	2235-02-103-0-46	ಪ್ರಾಯಪೂರ್ವ ಬಾಲಕಿಯರ ಯೋಜನೆ (ಪೌಷ್ಠಿಕಾಂಶ & ಪೌಷ್ಠಿಕೇತರಾಂಶ) (ಕೇಂದ್ರದ ಪಾಲು)	50.00
8	2235-02-103-0-69	ಪ್ರಾಯಪೂರ್ವ ಬಾಲಕಿಯರ ಯೋಜನೆ (ಸಬಲ) (ರಾಜ್ಯದ ಪಾಲು)	50.00
9	2235-02-103-0-61	ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ (ಕೇಂದ್ರದ ಪಾಲು)	11397.92
10	2235-02-103-0-68	ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ (ರಾಜ್ಯದ ಪಾಲು)	11521.11
11	2235-02-103-0-32	ಮಹಿಳಾ ರಕ್ಷಣೆ ಮತ್ತು ಸಬಲೀಕರಣ ಅಭಿಯಾನ (ಕೇಂದ್ರದ ಪಾಲು)	251.04
12	2235-02-103-0-33	ಮಹಿಳಾ ರಕ್ಷಣೆ ಮತ್ತು ಸಬಲೀಕರಣ ಅಭಿಯಾನ (ರಾಜ್ಯದ ಪಾಲು)	167.36
13	2235-02-103-0-64	ಶಕ್ತಿ ಸದನ (ಸ್ವಾಧಾರ ಗೃಹ, ಉಜ್ವಲ) (ಕೇಂದ್ರದ ಪಾಲು)	800.00
14	2235-02-103-0-70	ಶಕ್ತಿ ಸದನ (ಸ್ವಾಧಾರ ಗೃಹ, ಉಜ್ವಲ) (ಕೇಂದ್ರದ ಪಾಲು)	400.00
15	4235-02-102-1-03	ಅಂಗನವಾಡಿ ಕಟ್ಟಡಗಳ ಉನ್ನತೀಕರಣ (ಕೇಂದ್ರದ ಪಾಲು)	960.00
16	4235-02-102-1-04	ಅಂಗನವಾಡಿ ಕಟ್ಟಡಗಳ ಉನ್ನತೀಕರಣ (ರಾಜ್ಯದ ಪಾಲು)	641.00
17	4235-02-102-0-10 (423)	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಪಿಎಂ ಜನ್‌ಮನ್) 100% ಕೇಂದ್ರದ ಪಾಲು	1.00
ಒಟ್ಟು I			**41494.92**
II ಕೇಂದ್ರ ಪುರಸ್ಕೃತ ಯೋಜನೆಗಳು (ಜಿಲ್ಲಾ ವಲಯ ಯೋಜನೆ)			
1	2211-00-102-0-02 2235-02-196-1-05	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) (ರಾಜ್ಯದ ಪಾಲು)	1446.18
2	2211-00-102-0-02 2235-02-197-1-04	204 ಶಿಶು ಅಭಿವೃದ್ಧಿ ಯೋಜನೆಯ ಆಡಳಿತ ವೆಚ್ಚ (TP) (ರಾಜ್ಯದ ಪಾಲು)	171871.99
3	2235-00-101-0-61 2236-02-197-6-01	ಪೂರಕ ಪೌಷ್ಟಿಕ ಆಹಾರ ಯೋಜನೆ (TP) (ಕೆಂದ್ರದ ಪಾಲು)	96499.00
4	2235-00-101-0-63 2236-02-197-6-02	ಪೂರಕ ಪೌಷ್ಟಿಕ ಆಹಾರ ಯೋಜನೆ (TP) (ರಾಜ್ಯದ ಪಾಲು)	97499.00
5	2235-00-101-0-63 2236-02-197-1-02	ಪೌಷ್ಟಿಕಾಂಶ ಕಾರ್ಯಕ್ರಮ ರಾಜ್ಯದ ಹೆಚ್ಚುವರಿ ಅನುದಾನ (ಕ್ಷೀರ ಭಾಗ್ಯ, ಸೃಷ್ಟಿ, ಮಾತೃಪೂರ್ಣ)	89300.01

6	2235-02-102-0-50	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) (ಕೇಂದ್ರದ ಪಾಲು)	165.82
7	2235-02-102-0-51	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) (ರಾಜ್ಯದ ಪಾಲು)	266.46
8	2235-02-102-0-52	204 ಶಿಶು ಅಭಿವೃದ್ಧಿ ಯೋಜನೆಯ ಆಡಳಿತ ವೆಚ್ಚ (TP) (ಕೇಂದ್ರದ ಪಾಲು)	61848.81
9	2235-02-102-0-53	204 ಶಿಶು ಅಭಿವೃದ್ಧಿ ಯೋಜನೆಯ ಆಡಳಿತ ವೆಚ್ಚ (TP) (ರಾಜ್ಯದ ಪಾಲು)	49830.19
10	2235-02-103-0-82	ಮಹಿಳಾ ಸಹಾಯವಾಣಿ (ಕೇಂದ್ರದ ಪಾಲು)	94.50
ಒಟ್ಟು II			**568727.46**
III ರಾಜ್ಯ ವಲಯ ಯೋಜನೆಗಳು			
1	2235-02-001-0-01	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಪ್ರಧಾನ ಕಛೇರಿ)	2232.94
2	2235-02-102-0-04	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (H.O. Cell)	28743.77
3	2235-02-102-0-24	ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟದ ನಿವಾರಣೆಯ ಯೋಜನೆ ಮತ್ತು ಬಾಲ್ಯ ವಿವಾಹ ನಿಷೇಧ ಅನುಷ್ಠಾನ ಕಾರ್ಯಕ್ರಮ	105.00
4	2235-02-102-0-25	ಭಾಗ್ಯಲಕ್ಷ್ಮೀ ಯೋಜನೆ	18000.00
5	2235-02-001-0-01 (15)	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ	30.00
6	2235-02-102-0-40	ಅಂಗನವಾಡಿಗಳ ನಿರ್ವಹಣೆ	1000.00
7	2235-02-102-0-45	ಶಿಶುವಿಹಾರಗಳು	562.29
8	2235-02-001-0-01 (051)	ಮಕ್ಕಳ ದಿನಾಚರಣೆ	26.00
9	2235-02-001-0-01 (051)	ಮಹಿಳಾ ದಿನಾಚರಣೆ	0.00
10	2235-02-103-0-41	ಸ್ತ್ರೀ ಶಕ್ತಿ ಯೋಜನೆ	360.53
11	2235-02-103-0-73	ಗೃಹಲಕ್ಷ್ಮೀ ಯೋಜನೆ	1750000.00
12	2235-02-103-0-52	ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರಿಗೆ ರಕ್ಷಣೆ ನೀಡುವ ಯೋಜನೆ	1435.52
13	2235-02-103-0-72	ಸ್ವೂರ್ತಿ-ಹದಿಹರೆಯದ ಹೆಣ್ಣು ಮಕ್ಕಳಿಗೆ ಜೀವನ ಕೌಶಲ್ಯ ಆಧಾರಿತ ಕಾರ್ಯಕ್ರಮ	800.00

14	2235-02-103-0-99-100	ಸಾಂತ್ವನ ಯೋಜನೆ	1050.00
15	2235-02-103-0-99-100	ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ	1000.00
16	2235-02-103-0-99-100	ಬಾಲಕಿಯರ ವಸತಿ ನಿಲಯ	460.02
17	2235-02-106-0-05	ಸುಧಾರಣೆ ಸಂಸ್ಥೆಗಳ ಕಟ್ಟಡ ದುರಸ್ತಿ ಹಾಗೂ ನಿರ್ವಹಣೆ	400.00
18	2235-02-106-0-06	ರಾಜ್ಯ ಮಹಿಳಾ ನಿಲಯ ಮತ್ತು ಸ್ವೀಕಾರ ಕೇಂದ್ರ	803.36
19	2235-02-106-0-15	ಉತ್ಕೃಷ್ಟತಾ ಕೇಂದ್ರ	50.00
20	2235-60-103-0-01	ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಮರಣ ಪರಿಹಾರ/ವೈದ್ಯಕೀಯ ವೆಚ್ಚ ಭರಿಸಲು ಕ್ಷೇಮಾಭಿವೃದ್ಧಿ ನಿಧಿ	168.57
21	2235-60-103-0-1 (059, 422 423)	ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನೂತನ ಪಿಂಚಣಿ ವೆಚ್ಚ	913.93
22	2235-60-103-0-01 (059)	ಎನ್.ಪಿ.ಎಸ್. ಲೈಟ್ ಯೋಜನೆಯಿಂದ ವಂಚಿತರಾದ ಅಂ ಕಾ/ಸಹಾಯಕಿಯರಿಗೆ ಇಡಿಗಂಟು ಯೋಜನೆ	117.50
23	4235-02-102-0-02	ಅಂಗನವಾಡಿ ಕಟ್ಟಡಗಳ ವಿಶೇಷ ಅಭಿವೃದ್ಧಿ ಯೋಜನೆ	3500.00
24	4235-02-102-0-06	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಐ.ಸಿ.ಡಿ.ಎಸ್.-ನರೇಗ)	3000.00
24	4235-02-106-1-01-139	ಸುಧಾರಣಾ ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಕಾಮಗಾರಿ	100.00
ಒಟ್ಟು III			**1814859.93**
IV ಜಿಲ್ಲಾ ವಲಯ ಯೋಜನೆಗಳು			
1	2211-00-102-0-63	ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ	23.00

2	2211-00-102-0-30	ಅಂಗನವಾಡಿ ಕಟ್ಟಡ ನಿರ್ವಹಣೆ ಮತ್ತು ದುರಸ್ತಿ (ZP)	3033.00
3	2235-00-101-0-27	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (ಜಿಲ್ಲಾ ಸಿಬ್ಬಂದಿ ಮತ್ತು ಆಡಳಿತ)	1683.89
ಒಟ್ಟು IV			**4739.69**
V ಇತರೆ			
1	2235-02-107-0-03	ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ (ಸಕಾಲ)	1.00
2	2235-60-001-0-03	ನಿರ್ದೇಶನ ಮತ್ತು ಆಡಳಿತ (ಖಾಲಿ ಹುದ್ದೆಗಳಿಗಾಗಿ ಅನುದಾನ)	2829.62
ಒಟ್ಟು V			**2830.62**
ಒಟ್ಟು ಮಮಅಇ (I, II, III, IV & V)			**2432652.82**

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಕ್ರ.ಸಂ	ಲೆಕ್ಕ ಶೀರ್ಷಿಕೆ	ಯೋಜನೆ	ಪರಿಷ್ಕೃತ ಆಯವ್ಯಯ ಅಂದಾಜು 2023-24 (ರೂ. ಲಕ್ಷಗಳಲ್ಲಿ)
II	**ರಾಜ್ಯ ವಲಯ**		
1	2235-02-001-0-03	ಸಮಾಜ ಸೇವಾ ಸಂಕೀರ್ಣ-ಅನುಪಾಲನಾ ಗೃಹ - ಮಾನಸ ಕೇಂದ್ರ	361.09
2	2235-02-001-0-05	ಅಂಗವಿಕಲರಿಗಾಗಿ ನಿರ್ದೇಶನಾಲಯ	303.93
3	2235-02-101-0-02	ಕಿವುಡ ಮತ್ತು ಅಂಧ ಮಕ್ಕಳ ಸರ್ಕಾರಿ ಶಾಲೆಗಳ ಅಭಿವೃದ್ಧಿ	211.39
4	2235-02-101-0-05	ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ	625.00
5	2235-02-101-0-41	ಅಶಕ್ತರಿಗಾಗಿ ಅಶಕ್ತ ಅಧಿನಿಯಮ ಅನುಷ್ಠಾನ (ಸಿಪ್ಡಾ)	455.30
6	2235-02-101-0-47	ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ	82.56

7	2235-02-101-0-50	ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು	395.66
8	2235-02-101-0-52	ಅಂಗವಿಕಲರಿಗೆ ಸಾಧನ ಸಲಕರಣೆಗಳು	5340.01
9	2235-02-101-0-53	ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ	6818.78
10	2235-02-101-0-55	ವಿಕಲಚೇತನರಿಗೆ ಉದ್ಯೋಗ ಕೋಶ	3.00
11	2235-02-101-0-99	ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ	2910.63
12	2235-02-104-2-04	ಹಿರಿಯ ನಾಗರಿಕರ ನೀತಿ	554.96
13	2235-02-104-2-06	ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ	9876.37
		ಒಟ್ಟು	**27938.68**
II	**ಜಿಲ್ಲಾ ವಲಯ**		
1	2235-00-101-0-28	ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು	1668.95
2	2235-00-101-0-30	ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು	528.00
		ಒಟ್ಟು ಮೊತ್ತ	**2196.95**
ಮೊತ್ತ (I+II)		**ಒಟ್ಟು**	**30135.63**

ಮಕ್ಕಳ ರಕ್ಷಣಾ ನಿರ್ದೇಶನಾಲಯ

ಕ್ರ.ಸಂ	ಲೆಕ್ಕ ಶೀರ್ಷಿಕೆ	ಯೋಜನೆಗಳ ವಿವರ	2023-24ನೇ ಸಾಲಿನ ಪರಿಷ್ಕೃತ ಆಯವ್ಯಯ (ರೂ. ಲಕ್ಷಗಳಲ್ಲಿ)
ಅ. ರಾಜ್ಯ ವಲಯ ಯೋಜನೆ			
1	2235-02-102-0-33	ವಿಶೇಷ ಪಾಲನಾ ಯೋಜನೆ	2200.00
2	2235-02-102-0-37	ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ	1073.77
		ಒಟ್ಟು	**3273.77**
ಆ. ಕೇಂದ್ರ ವಲಯ ಯೋಜನೆ			
1	2235-02-102-0-54	ಮಕ್ಕಳ ಸಹಾಯವಾಣಿ (ಮಿಷನ್ ವಾತ್ಸಲ್ಯ ಯೋಜನೆ)	772.07
		ಒಟ್ಟು	**772.07**

ಇ. ಕೇಂದ್ರ ಪುರಸ್ಕೃತ ಯೋಜನೆ			
1.	2235-02-102-0-36	ಸಮಗ್ರ ಮಕ್ಕಳ ರಕ್ಷಣಾ ಯೋಜನೆ	6012.30
2.	2235-02-102-0-48	ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಮಿಷನ್ ವಾತ್ಸಲ್ಯ -ಕೇಂದ್ರದ ಪಾಲು)	6189.84
3.	2235-02-102-0-49	ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಮಿಷನ್ ವಾತ್ಸಲ್ಯ -ರಾಜ್ಯದ ಪಾಲು)	4128.85
		ಒಟ್ಟು ಮೊತ್ತ	**16330.99**
		ಒಟ್ಟಾರೆ ಮೊತ್ತ (ಅ+ಆ+ಇ)	**20376.83**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕ್ರ.ಸಂ	ಲೆಕ್ಕಶೀರ್ಷಿಕೆ	ಯೋಜನೆಯ ಹೆಸರು	ಅನುದಾನ ಹಂಚಿಕೆ (ರೂ.ಲಕ್ಷಗಳಲ್ಲಿ)
1	2235-02-103-0-38	ಉದ್ಯೋಗಿನಿ ಯೋಜನೆ	1500.00
2	2235-02-200-0-05-059	ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ	300.00
3	2235-02-103-0-16	ಮಹಿಳಾ ತರಬೇತಿ ಯೋಜನೆ	200.00
4	2235-01-202-3-01	ಚೇತನ ಮತ್ತು ದೇವದಾಸಿ ಪುನರ್ವಸತಿ ಯೋಜನೆ	537.20
5	2235-02-001-0-10	ಬಡ್ಡಿ ಸಹಾಯಧನ - KSFC	5200.00
6	2235-02-104-2-07-059	ಧನಶ್ರೀ ಯೋಜನೆ	200.00
7	2235-02-001-0-06	ಸಿಬ್ಬಂದಿ ಮತ್ತು ಆಡಳಿತ	445.56
8	2235-02-001-0-12	ಇಂದಿರಾ ಯೋಜನೆ	2.00
9	2235-02-001-0-11	(SCSP-TSP - Unspent) ಉದ್ಯೋಗಿನಿ ಯೋಜನೆ	199.48
	ಒಟ್ಟು		**8584.24**

XII. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು:

ಅನ್ವಯಿಸುವುದಿಲ್ಲ.

XIII. ನೀಡಿರುವ ರಿಯಾಯತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು:

ಉದ್ಭವಿಸುವುದಿಲ್ಲ.

XIV. ಲಭ್ಯವಾಗುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:

ಈ ಬಗ್ಗೆ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

XV. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದರೆ ಅದರ ಕೆಲಸದ ಸಮಯವನ್ನು ಒಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:

ಈ ಇಲಾಖೆಯಲ್ಲಿ ಪ್ರತ್ಯೇಕವಾದ ಯಾವುದೇ ಗ್ರಂಥಾಲಯವಿರುವುದಿಲ್ಲ.

XVI. ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಅವರ ವಿವರಗಳು:

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಕ್ರಮ ಸಂಖ್ಯೆ	**ಶಾಖೆಗಳು**	ಮಾಹಿತಿ ಪಡೆಯುವ ಹಕ್ಕುಕಾಯ್ದೆ 2005ರ ಸೆಕ್ಷನ್ 5(1)ರ ಪ್ರಕಾರ **ಸಾರ್ವಜನಿಕ ಮಾಹಿತಿ ಅಧಿಕಾರಿ**	ಮಾಹಿತಿ ಪಡೆಯುವ ಹಕ್ಕುಕಾಯ್ದೆ 2005ರ ಸೆಕ್ಷನ್ 5(2)ರ ಪ್ರಕಾರ **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ**	**ಮಾಹಿತಿ ಪಡೆಯುವ ಹಕ್ಕುಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರ**
1	ಸ್ವೀಕೃತಿ, ರವಾನೆ ಮತ್ತು ಸಮನ್ವಯ ಶಾಖೆ	ಸರ್ಕಾರದ ಅಧೀನ ಕಾರ್ಯದರ್ಶಿ-1 ದೂರವಾಣಿ ಸಂಖ್ಯೆ : 080-2203 2931	ಶಾಖಾಧಿಕಾರಿ ಸ್ವೀಕೃತಿ, ರವಾನೆ ಮತ್ತು ಸಮನ್ವಯ ದೂರವಾಣಿ ಸಂಖ್ಯೆ : 080-2203 2603	ಸರ್ಕಾರದ ಜಂಟಿ ಕಾರ್ಯದರ್ಶಿ ದೂರವಾಣಿ ಸಂ: 080-2666 0373
2	ಎ-ಶಾಖೆ	ಸರ್ಕಾರದ ಅಧೀನ ಕಾರ್ಯದರ್ಶಿ-1 ದೂರವಾಣಿ ಸಂಖ್ಯೆ : 080-2203 2931	ಶಾಖಾಧಿಕಾರಿ-ಎ ದೂರವಾಣಿ ಸಂಖ್ಯೆ : 080-2203 2152	
2	ಬಿ-ಶಾಖೆ	ಸರ್ಕಾರದ ಅಧೀನ ಕಾರ್ಯದರ್ಶಿ-2 ದೂರವಾಣಿ ಸಂಖ್ಯೆ : 080-2203 2240	ಶಾಖಾಧಿಕಾರಿ-ಬಿ ದೂರವಾಣಿ ಸಂಖ್ಯೆ : 080-2203 2151	
3	ಸಿ-ಶಾಖೆ	ಸರ್ಕಾರದ ಅಧೀನ ಕಾರ್ಯದರ್ಶಿ-2 ದೂರವಾಣಿ ಸಂಖ್ಯೆ : 080-2203 2240	ಶಾಖಾಧಿಕಾರಿ-ಸಿ ದೂರವಾಣಿ ಸಂಖ್ಯೆ : 080-2203 2816	ಸರ್ಕಾರದ ಉಪ ಕಾರ್ಯದರ್ಶಿ ದೂರವಾಣಿ ಸಂ: 080-2235 3992
4	ಡಿ-ಶಾಖೆ	ಸರ್ಕಾರದ ಅಧೀನ ಕಾರ್ಯದರ್ಶಿ-3 ದೂರವಾಣಿ ಸಂಖ್ಯೆ : 080-2203 2931	ಶಾಖಾಧಿಕಾರಿ-ಡಿ ದೂರವಾಣಿ ಸಂಖ್ಯೆ : 080-2203 2306	
5	ಇ-ಶಾಖೆ	ಸರ್ಕಾರದ ಅಧೀನ ಕಾರ್ಯದರ್ಶಿ-3 ದೂರವಾಣಿ ಸಂಖ್ಯೆ : 080-2203 2931	ಶಾಖಾಧಿಕಾರಿ-ಇ ದೂರವಾಣಿ ಸಂಖ್ಯೆ : 080-2203 2574	

XVII. ನಿಯಮಿಸಬಹುದಾದಂಥ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ-ಪರಿಷ್ಕರಿಸತಕ್ಕದ್ದು:

ಪರಿಷ್ಕರಿಸಲಾಗುತ್ತಿದೆ.

(ನಿರ್ಮಲಾ ಎಸ್. ಖಟಾವ್‌ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ

*****

PR-5733

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH